# ನಾದನೂಪುರ ವಂಡಾರು
# Nadanoopura Vandaru

ನಾದ ನೂಪುರ ವಂಡಾರು




ವರುಷ ತುಂಬಿದ ಹರ್ಷ..

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಡಿಜಿಟಲ್ ಯಕ್ಷ ಪತ್ರಿಕೆ ನಡೆದು ಬಂದ ಹಾದಿ
ವಸ್ತುನಿಷ್ಠ, ಪ್ರಬುದ್ಧ, ಮೌಲಿಕ, ಲೇಖನಗಳೆ ಜನಪ್ರಿಯತೆಗೆ ಕಾರಣ
ಡಿಜಿಟಲ್ ಮಾಧ್ಯಮದಲ್ಲಿ ನಾದ ನೂಪುರ ವಂಡಾರು ನಿಯತಕಾಲಿಕದ ಯಶಸ್ಸು
ನಾದ ನೂಪುರ ಸಂಗ್ರಹಯೋಗ್ಯ ಸಂಚಿಕೆಗಳು
ಶ್ರೀ ಮಂದಾರ್ತಿ ಕ್ಷೇತ್ರದ ಮೇಳದ ಹಿನ್ನಲೆ
ಧೀರ ಕಲೆಯೊಳಗೆ ಕೀರವಾಣಿಯರು– ಶ್ರೀಮತಿ ಕಿರಣ್ ಆರ್ ಪೈ
ಕಾಡುವ ಪಾತ್ರ– 1. ಮೊಹಮ್ಮದ್ ಗೌಸ್
2. ನಿಡ್ಲೆ ಗೋವಿಂದ ಭಟ್
ನಮ್ಮ ಲೈಬ್ರರಿ – ಪಾರ್ತಿ ಸುಬ್ಬ ಯಕ್ಷಗಾನ ಪ್ರಸಂಗ ಸಂಪುಟ

## ತಿಂಗಳ ಹೈಲೈಟ್ಸ್

**ಡಿಜಿಟಲ್ ಯಕ್ಷ ಪತ್ರಿಕೆಗೆ ವರುಷವೊಂದು: ನಡೆದು ಬಂದ ಹಾದಿಯ ಹಿನ್ನೋಟ**

**ವಸ್ತುನಿಷ್ಠ, ಪ್ರಬುದ್ಧ, ಮೌಲಿಕ, ಕಲೋಚಿತ ಹಾಗೂ ಕಾಲೋಚಿತ ಲೇಖನಗಳೆ ಜನಪ್ರಿಯತೆಗೆ ಕಾರಣ – ಕುಡ್ವ**

**ಡಿಜಿಟಲ್ ಮಾಧ್ಯಮದಲ್ಲಿ ನಾದ ನೂಪುರ ವಂಡಾರು ನಿಯತಕಾಲಿಕದ ಯಶಸ್ಸು – ಸಾಯಿ ಸುಮಾ ನಾವುಡ**

**ಶ್ರೀ ಮಂದಾರ್ತಿ ಕ್ಷೇತ್ರದ ಮೇಳದ ಹಿನ್ನಲೆ – ಪ್ರೊ ಎಸ್ ವಿ ಉದಯ್ ಕುಮಾರ್ ಶೆಟ್ಟಿ**

**ಪಾರ್ತಿ ಸುಬ್ಬ ಯಕ್ಷಗಾನ ಪ್ರಸಂಗ ಸಂಪುಟ – ಉಮೇಶ್ ಶಿರೂರ್**

### ಬೋರ್ಡ್ ರೂಂ

***ನಮಸ್ಕಾರ ಓದುಗರೇ,***

ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು. ಮಾರ್ಚ್ ತಿಂಗಳಿಗೆ ನಾದನೂಪುರ ವಂಡಾರು ಡಿಜಿಟಲ್ ಯಕ್ಷಪತ್ರಿಕೆ ಯಶಸ್ವಿ ಒಂದು ವಸಂತವನ್ನು ಪೂರೈಸಿ ಇದೀಗ ಎರಡನೇ ವರುಷಕ್ಕೆ ಕಾಲಿಡುತ್ತಿದೆ. ಹಾಗಾಗಿ **'ನಿಮ್ಮ'** ಈ ಯಕ್ಷ ಪತ್ರಿಕೆಗೆ ಪ್ರತಿ ಯುಗಾದಿಯೂ ವಾರ್ಷಿಕ ಸಂಭ್ರಮವನ್ನು ಹೆಚ್ಚಿಸುವಂತಹಾ ಸಂದರ್ಭ. ಪ್ರತಿ ತಿಂಗಳೂ ಓದುಗರಿಂದ ಬರುವ ವಾಟ್ಸಾಪ್ ಸಂದೇಶಗಳು, ಲೇಖನಗಳ ಬಗ್ಗೆ ಒಳ್ಳೆಯ ಮಾತುಗಳು, ನಮ್ಮ ಉದ್ದೇಶಕ್ಕೆ ಒಂದು ಸಾರ್ಥಕತೆಯ ಭಾವ ನೀಡಿದೆ. ಅದರೊಂದಿಗೆ *'ಪತ್ರಿಕೆಯನ್ನು ನಿಲ್ಲಿಸಬೇಡಿ. ಪತ್ರಿಕೆಯ ಗುಣಮಟ್ಟ ಚೆನ್ನಾಗಿದೆ'* ಎಂಬ ಪ್ರಾಮಾಣಿಕ ಅಭಿಪ್ರಾಯಗಳು ನಮಗೆ ಪ್ರೋತ್ಸಾಹ ನೀಡುತ್ತಿದೆ. ಟ್ರಸ್ಟ್‌ನ ಚಟುವಟಿಕಗಳಲ್ಲಿ ಈ ಪತ್ರಿಕೆ ಮುಖ್ಯ ದಾಖಲಾರ್ಹ ಚಟುವಟಿಕೆಯಾಗಿ ಗುರುತಿಸಿಕೊಳ್ಳುವಂಥದ್ದು. ಅದಕ್ಕೆ ಕಾರಣ ಪತ್ರಿಕಾ ತಂಡದವರು ಒದಗಿಸಿಕೊಡುತ್ತಿರುವ ಮೌಲ್ವಿಕ ಲೇಖನಗಳು. ಇದರೊಂದಿಗೆ ಇದು ಡಿಜಿಟಲ್ ಪತ್ರಿಕೆಯಾದುದರಿಂದ ವೆಬ್ ಸೈಟ್ ಹಾಗು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಗೊಳ್ಳುತ್ತಿದೆ. ಡಿಜಿಟಲ್ ರೂಪದ ಈ ಪತ್ರಿಕೆಯನ್ನು ಮೊಬೈಲ್ ಹಾಗೂ ಕಂಪ್ಯೂಟರ್ ಮೂಲಕ ಓದಬೇಕಾಗುತ್ತದೆ. ಮೊಬೈಲ್ ಬಳಸುವವರು 10-12 ಪುಟಗಳ ಪತ್ರಿಕೆಯನ್ನು ಸಂಪೂರ್ಣವಾಗಿ ಓದುವುದು ಕೆಲವರಿಗೆ ಸಮಸ್ಯೆಯಾಗಬಹುದು. ಆ ಕಾರಣದಿಂದ ಪತ್ರಿಕೆಯ ರೂಪದಲ್ಲಿ ಕಳುಹಿಸಿ ಕೊಡಿ ಎಂಬ ಬೇಡಿಕೆ ಸಾಕಷ್ಟಿದೆ. ನಾವು ಅದಕ್ಕೆ ಮುಂದಾಗದೇ ಇರುವ ಕಾರಣ ಎಂದರೆ ಸಂಪನ್ಮೂಲದ ಕೊರತೆ. ಈಗ ನಮ್ಮೊಂದಿಗಿರುವ ತಂಡದ ಚಿತ್ರಣ ನೀಡುವುದಾದರೆ ನಮ್ಮ ಆಶಯಗಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿ ಯಾವುದೇ ಸಂಭಾವನೆ ನಿರೀಕ್ಷೆ ಮಾಡದೆ ಲೇಖನಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಈ ಬರಹಗಾರರಿಗೆ ಕಿಂಚಿತ್ ಸಂಭಾವನೆ ನೀಡಬೇಕೆಂಬ ಮಹದಾಶಯ ನಮ್ಮದು. ಆದರೆ ಅಂಬೆಗಾಲಿಡುತ್ತಿರುವ ಈ ಸಂದರ್ಭದಲ್ಲಿ ಅದು ತುಸು ಕಷ್ಟ ಎನಿಸಿದೆ. ಇದರೊಂದಿಗೆ ಪತ್ರಿಕೆಯ ರೂಪದಲ್ಲಿ ಪ್ರಕಟಿಸುವುದಕ್ಕೆ ಒಂದಷ್ಟು ಪ್ರಕಟಣಾ ವೆಚ್ಚವನ್ನು ಭರಿಸಬೇಕಾಗುತ್ತದೆ. ಜೊತೆಗೆ ನಮ್ಮ ನಿಯಮಿತ ಲೇಖಕರಲ್ಲದೆ ತಿಂಗಳಿಗೆ ಮೂರರಿಂದ ನಾಲ್ಕು ದಿನಗಳನ್ನು ನೀಡಬಲ್ಲ ಇಬ್ಬರು ಕಾರ್ಯಕರ್ತರ ಅವಶ್ಯಕತೆ ಬಹಳಷ್ಟಿದೆ. ಓದುಗರ ಸಂದೇಶ, ಅನಿಸಿಕೆಗಳಿಗೆ ಪ್ರತ್ಯುತ್ತರಿಸುವ ಹಾಗೂ ಲೇಖನ, ಟ್ರಸ್ಟ್, ಪತ್ರಿಕೆಯ ಕುರಿತಯ ಮಾಹಿತಿ ನೀಡಲೆಂದೇ ಹೆಲ್ಪ್ ಡೆಸ್ಕ್ ರೀತಿಯಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಅಂತಹ ಒಂದು ವ್ಯವಸ್ಥೆಯೂ ಬರಲಿದೆ. ಅಲ್ಲಿವರೆಗೆ ಟ್ರಸ್ಟ್ ನ ಪದಾಧಿಕಾರಿಗಳು ಹಾಗೂ ಪತ್ರಿಕೆಯ ಮುಖ್ಯ ಸಂಪಾದಕರು ಆ ಕಾರ್ಯವನ್ನು ನಿಭಾಯಿಸಬೇಕಿದೆ. ಆದರೂ ಪರಿಚಯಾತ್ಮಕ



**ಗೋವಿಂದ ವಂಡಾರು**

ಲೇಖನ ಹಾಗೂ ಸಂದರ್ಶನ ನಡೆಸಿದಾಗ ಆ ವ್ಯಕ್ತಿಗಳಿಗೆ ಪ್ರಕಟಿತ ರೂಪದ ಪತ್ರಿಕೆಯನ್ನು ಕಳುಹಿಸಿ ಕೊಡುವ ತೀರ್ಮಾನ ಮಾಡಿದ್ದೇವೆ. ಇಂತಹ ಮಿತ ಸಂಪನ್ಮೂಲದಲ್ಲೂ ಗುಣಮಟ್ಟದ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ ಪತ್ರಿಕೆಯನ್ನು ಮುನ್ನಡೆಸುವ ಬದ್ಧತೆಗೆ ನಾವು ಸಿದ್ಧರಿದ್ದೇವೆ. ಮತ್ತೊಂದು ಸಂತೋಷದ ವಿಚಾರ ಎಂದರೆ ನಮ್ಮ ಟ್ರಸ್ಟ್ ಗೆ ಯಾವುದೇ ದೇಣಿಗೆ ನೀಡಿದರೂ ಅವರಿಗೆ ೮೦ ಜಿ ಕಾಯ್ದೆಯಡಿ ತೆರಿಗೆ ವಿನಾಯಿತಿ ದೊರಕುತ್ತದೆ. ಹೊಸ ವರ್ಷದಲ್ಲಿ ಹೊಸ ಹುರುಪು ಉತ್ಸಾಹದೊಂದಿಗೆ ಪತ್ರಿಕೆ ಹೊಸ ರೂಪದಲ್ಲಿ ಬರಲಿದೆ. ಕಳೆದೊಂದು ವರ್ಷದಲ್ಲಿ ಪತ್ರಿಕೆಯೊಂದಿಗಿನ ಅನುಭವಗಳ ಸಂಚಯವನ್ನು ಮುಂದಿನ ಪುಟಗಳಲ್ಲಿ ನಮ್ಮ ಲೇಖಕರು ಹಂಚಿಕೊಂಡಿದ್ದಾರೆ. ಓದಿ.. ಯಕ್ಷಗಾನದ ಅಕ್ಷರ ತೋರಣ, ನಾದನೂಪುರ ಡಿಜಿಟಲ್ ಯಕ್ಷ ಪತಿಕೆಯನ್ನು ಅದೇ ಪ್ರೀತಿಯಿಂದ ನಿಮ್ಮ ಮಡಿಲಿಗೆ ಹಾಕಿಕೊಳ್ಳಿ... **ನಿಮ್ಮವನೆ**
***ಗೋವಿಂದ ವಂಡಾರು***

## ಸಂಪಾದಕೀಯ

***ಆತ್ಮೀಯ ಓದುಗರೆ,***

ನಾದ ನೂಪುರ ವಂಡಾರು ನಿಯತಕಾಲಿಕವನ್ನು ಒಂದು ವರ್ಷ ಯಶಸ್ವಿಯಾಗಿ ನಡೆಸಿದ ಸಾರ್ಥಕತೆಯ ಕ್ಷಣದಲ್ಲಿ ನಾವಿದ್ದೇವೆ. ಮೊದಲ ಬಾರಿ ಡಿಜಿಟಲ್ ಪತ್ರಿಕೆ ಪ್ರಾರಂಭಿಸುವ ಹಂತದಲ್ಲಿ ತಂಡ ಕಟ್ಟುವುದು ಸವಾಲಿನ ಕೆಲಸವಾದರೂ ಉತ್ಸಾಹದ್ದಾಗಿತ್ತು. ಹಾಗೇ ಯಕ್ಷಗಾನದ ಅಭಿರುಚಿ ಇರುವವರನ್ನು ಇಲ್ಲಿ ಒಟ್ಟು ಹಾಕಬೇಕಿತ್ತು. ನಮ್ಮದೇ ಸಂಪರ್ಕ ವಲಯದಲ್ಲಿದ್ದ ಕೆಲವರನ್ನು ಫೋನ್ ಮುಖಾಂತರ ಮಾತನಾಡಿಸಿ ಅವರೊಂದಿಗೆ ನಮ್ಮ ಉದ್ದೇಶ ಆಶಯಗಳನ್ನು ತಿಳಿಸಿದೆವು. ಇದಕ್ಕೆ ಕೈ ಜೋಡಿಸಿ ಇಂದಿನವರೆಗೆ ಪತ್ರಿಕೆ ನಡೆಸಿಕೊಂಡು ಬಂದ ತಂಡದ ಹುರುಪು ಹುಮ್ಮಸ್ಸು, ಹಾಗೂ ಅವರ ಪಾಲುದಾರಿಕೆಯೇ ಇಂದು ಪತ್ರಿಕೆಯ ಯಶಸ್ಸಿಗೆ ಕಾರಣ ಅನ್ನೋದು ಅಕ್ಷರಶಃ ಸತ್ಯ.. ಈ ಪುಟ್ಟ ಸಂಭ್ರಮ ಯಶಸ್ಸಿನ ಕೀರ್ತಿ ಗರಿಮೆ ಸಲ್ಲಬೇಕಾದ್ದೆಂದರೆ ಒಂದು ನಮ್ಮ ಲೇಖಕರ ಬಳಗಕ್ಕೆ, ಮತ್ತೊಂದು ಓದುಗರಾದ ನಿಮಗೆ.

ನಮ್ಮ ಒಂದು ವರ್ಷದ ಪಯಣವನ್ನು ಮೆಲುಕು ಹಾಕೋದಾದ್ರೆ, ಸಂಪಾದಕೀಯದ ದೊಡ್ಡ ಜವಾಬ್ದಾರಿಯ ನೊಗವನ್ನು ನನ್ನ ಹೆಗಲ ಮೇಲೆಯೇ ಹೊತ್ತಿದ್ದರೂ, ಯಕ್ಷಗಾನದ ಆಳ ಅಗಲ ಬಲ್ಲ ಮತ್ತೊಬ್ಬ ಸಮರ್ಥ ವ್ಯಕ್ತಿ ಸಂಪಾದಕೀಯದ ಸೀಟ್ ನಲ್ಲಿ ಕುಳಿತರೆ ಒಳ್ಳೆಯದು ಎಂಬ ಅಭಿಪ್ರಾಯ ನನಗಿತ್ತು. ಆದ ಕಾರಣ ತಾಳಮದ್ದಳೆ ಅರ್ಥಧಾರಿ, ಹವ್ಯಾಸಿ ವೇಷಧಾರಿ, ಪ್ರಸಂಗಕರ್ತ, ಪುರಾಣ ಕಥೆಗಳು ಯಕ್ಷಗಾನದ ನಡೆಯನ್ನು ಬಲ್ಲ, ವಿಮರ್ಶಿಸಬಲ್ಲ ಬರಹದ ಅಭಿರುಚಿಯುಳ್ಳ ವೇದಮೂರ್ತಿ ಅಜಿತ್ ಕಾರಂತ್ ಸೂಕ್ತ ವ್ಯಕ್ತಿ ಎಂಬ ಅಭಿಪ್ರಾಯಕ್ಕೆ ಬಂದಿದ್ದೆವು. ಅದರಂತೆ ಗೌರವ ಸಂಪಾದಕರಾಗಿ ಲೇಖನಗಳ ವಿಮರ್ಶೆ, ತಿಂಗಳ ಮೊದಲ ಆದ್ಯತೆ ಇವುಗಳ ಹೊಣೆಯನ್ನು ಸಮರ್ಥವಾಗಿ 7 ಸಂಪುಟಗಳಲ್ಲಿ ನಿಭಾಯಿಸಿದ್ದಾರೆ. ಯಕ್ಷಗಾನ ಕ್ಷೇತ್ರದ ತಮ್ಮ ಅನುಭವಗಳು, ಸೂಚ್ಯ ರೂಪದ ಸಲಹೆಗಳನ್ನು ಸಂಪಾದಕೀಯ ವಿಭಾಗದಲ್ಲಿ ಕಾರಂತರು ಸೊಗಸಾಗಿ ಮಂಡಿಸಿದ್ದಾರೆ. ಯಕ್ಷಗಾನದ ಪ್ರಚಲಿತ ವಿಷಯಗಳ ಬಗ್ಗೆ ನಿಷ್ಠ ವಿಮರ್ಶೆ ಹಾಗೂ ವರದಿಗೆ ನಾವು ಆಯ್ಕೆ ಮಾಡಿಕೊಂಡದ್ದು ಬೆಂಗಳೂರು ನಿವಾಸಿಯಾದ ಐಟಿ ಉದ್ಯೋಗಿ ಹವ್ಯಾಸಿ ಯಕ್ಷಗಾನ ಕಲಾವಿದ ರವಿ ಮಡೋಡಿಯವರನ್ನು. ಕೆಲವಾರು ಸಂಚಿಕೆಗಳಲ್ಲಿ ಅವರ ವಸ್ತು ನಿಷ್ಠ ವಿಮರ್ಶೆ ಅವತ ವಿಷಯ ತಜ್ಞತೆಯನ್ನು ಸಾದರಪಡಿಸಿವೆ. ಅದರೊಂದಿಗೆ ಯಕ್ಷಗಾನ ಕ್ಷೇತ್ರದ ಬಹುಕಾಲದ ನಂಟು ಹೊಂದಿರುವ ತಾಳಮದ್ದಲೆ ಅರ್ಥದಾರಿಗಳಾದ ಎಂ ಶಾಂತಾರಾಮ ಕುಡ್ವ ಹಾಗೂ ಮಣಿಪಾಲ ಎಂಐಟಿ ಉದ್ಯೋಗಿ, ಹಿತೈಷಿಗಳಾದ, ಯಕ್ಷಗಾನ ವಿಮರ್ಶಕರು, ಲೇಖಕರು, ಪ್ರೊ ಎಸ್ ವಿ. ಉದಯ್ ಕುಮಾರ್ ಶೆಟ್ಟಿಯವರು ಪ್ರಚಲಿತ ಹಾಗೂ ವ್ಯಕ್ತಿ ಸಾಧನೆಯ ವಿಚಾರಗಳ ಬಗ್ಗೆ ದಾಖಲಾರ್ಹ ಲೇಖನಗಳನ್ನು ಒದಗಿಸಿದ್ದಾರೆ. ಮಹಿಳಾ ಸಾಧಕಿಯರ ಅಂಕಣ ಕ್ಕೆ ಮಹಿಳಾ ಕಲಾವಿದೆ ಹಾಗೂ ಬರಹಗಾರ್ತಿಯಾದ ಎಂ ಸಾಯಿಸುಮಾ ನಾವುಡರು ಯಕ್ಷಗಾನದ ಮಹಿಳಾ ಮಣಿಗಳ ಪರಿಚಯ ದಾಖಲಾರ್ಹ ಲೇಖನಗಳನ್ನು ಚೆಂದದ ಬರಹದಲ್ಲಿ ನೀಡುತ್ತಾ ಬಂದಿದ್ದಾರೆ. ಪುಸ್ತಕ/ಕೃತಿ ಪರಿಚಯ ಅಂಕಣಕ್ಕೆ ಉಮೇಶ್ ಶಿರೂರು ಪ್ರಸಂಗ ಪ್ರತಿಗಳ ಪರಿಚಯಾತ್ಮಕ ಲೇಖನಗಳನ್ನು ನೀಡುತ್ತಾ ಬಂದಿದ್ದಾರೆ. ತಾಳಮದ್ದಲೆ ಅರ್ಥಧಾರಿಗಳಾದ ರಜನೀಶ್ ಹೊಳ್ಳರು ಕೆಲವು ಸರಣಿಗಳಲ್ಲಿ ನವರಸಗಳ ವಿಶ್ಲೇಷಣೆಯನ್ನು ಲೇಖನದ ರೂಪದಲ್ಲಿ ನೀಡಿದ್ದಾರೆ. ಜೊತೆಗೆ ಆಡಿಯೋ ಸಂದರ್ಶನಗಳು, ಕಿರು ಸುದ್ದಿ ಮಾಹಿತಿಗಳು ಪತ್ರಿಕೆಯ ಒಟ್ಟಂದವನ್ನು ಹೆಚ್ಚಿಸಿವೆ. ಅದರೊಂದಿಗೆ ಓದುಗರ ಪ್ರೀತಿಪೂರ್ವಕ ಮೆಚ್ಚುಗೆ, ಸಲಹೆ ಸೂಚನೆಗಳು ನಮ್ಮನ್ನು ತಿದ್ದಿ ತೀಡಿವೆ. ನಿಮ್ಮೆಲ್ಲರ ಈ ಪ್ರೀತಿ ಪ್ರೋತ್ಸಾಹ ನಮ್ಮ ಮುಂದಿನ ಹೆಜ್ಜೆಗೆ ಸ್ಫೂರ್ತಿ. ಕೆಲವೊಂದು ಅನಿವಾರ್ಯ ಬದಲಾವಣೆಗಳೊಂದಿಗೆ ಇನ್ನೂ ಉತ್ತಮ ಗುಣಮಟ್ಟದ ಲೇಖನಗಳನ್ನು ಮುಂದಿನ ಸಂಚಿಕೆಗಳು ಹೊತ್ತ ತರಲಿವೆ ಎಂಬ ಭರವಸೆ ನೀಡುವುದರೊಂದಿಗೆ ಈ ವರ್ಷದ ಮೊದಲ ಸಂಚಿಕೆ ಈಗ ನಿಮ್ಮ ಕೈಯ್ಯಲ್ಲಿ. **ಶುಭಾಶಯ**


ನಾದನೂಪುರ ವಂಡಾರು
Nadanoopura Vandaru


Nadanoopura newsletter | Jan 2023 | Page - 3
ಯಕ್ಷಗಾನ ಸಾಹಿತ್ಯ ಸಮ್ಮೇಳನ – ಅನಿವಾರ್ಯ ಏಕೆ??


Nadanoopura newsletter | Feb 2023 | Page - 6

# ನಾದನೂಪುರ ವಂಡಾರು ಡಿಜಿ ಪತ್ರಿಕೆ – ವರ್ಷ ತುಂಬಿದ ಹರ್ಷ

## ಯಕ್ಷ ಪತ್ರಿಕೆ ನಡೆದು ಬಂದ ಹಾದಿ




ನಾದನೂಪುರ ವಂಡಾರು ಡಿಜಿಟಲ್ ಯಕ್ಷಪತ್ರಿಕೆಗೆ ವರುಷ ತುಂಬಿದ ಹರ್ಷ. ಈ ಸಂಭ್ರಮದಲ್ಲಿ ನಮ್ಮ ಒಂದು ವರ್ಷದ ಪಯಣದ ಕಿರು ನೋಟ ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ. ಯಕ್ಷ ಪತ್ರಿಕೆಯ ಒಂದು ವರ್ಷದ ರೀಚ್ ಹೇಳುವುದಾದರೆ ಒಂದಷ್ಟು ಕಲಾವಿದರು, ಪ್ರಬುದ್ಧ ಓದುಗರ ಬಳಗವನ್ನು ಸೃಷ್ಟಿಸಿಕೊಂಡಿದೆ. ಬೋರ್ಡ್ ರೂಂ ನಲ್ಲಿ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಸಂಸ್ಥೆಯ ಸಂಸ್ಥಾಪಕರಾದ ಗೋವಿಂದ ವಂಡಾರು ರವರು ಟ್ರಸ್ಟ್ ನ ಚಟುವಟಿಕೆಗಳ ಅಪ್ ಡೇಟ್ಸ್, ಸಂಪಾದಕೀಯದಲ್ಲಿ, ಚಿಂತನೆಗೆ ಹಚ್ಚುವ ವಿಚಾರಗಳ ಹೊಳಹು, ಪ್ರತಿ ತಿಂಗಳೂ ಎರಡು ಪ್ರಚಲಿತ ವಿಚಾರಗಳ ಲೇಖನ, ಮಹಿಳಾ ಸಾಧಕಿಯರ ಪರಿಚಯ ಸರಣಿ, ತೆಂಕು ಹಾಗೂ ಬಡಗಿನ ತೆರೆ ಮರೆಯ ಕಲಾವಿದರ ಸಂದರ್ಶನ, ಯಕ್ಷಗಾನದ ಪುಸ್ತಕ ಪರಿಚಯ, ಯಕ್ಷ ಕಲಾ ಸಂಸ್ಥೆಗಳ ಪರಿಚಯ, ಬಾಟಮ್ ಲೈನ್ ನಲ್ಲಿ ಎರಡು ಸಾಲುಗಳ ಅಪರೂಪದ ಮಾಹಿತಿ, ಹೀಗೆ ಯಕ್ಷಗಾನ ಕ್ಷೇತ್ರದ ವೈವಿಧ್ಯಗಳನ್ನು ದಾಖಲು ಮಾಡುವ ಈ ಪತ್ರಿಕೆ ತನ್ನ ಉದ್ದೇಶದಲ್ಲಿ ಯಶಸ್ಸು ಕಂಡಿದೆ. ಪ್ರತಿ ತಿಂಗಳೂ 20ನೆಯ ತಾರೀಕಿನಿಂದ 30 ನೇ ತಾರೀಕಿನವರೆಗೆ ತಿಂಗಳ ಮುಖ್ಯ ವಿಷಯವನ್ನು ಗುರುತಿಸಿ, ಲೇಖನಗಳನ್ನು ಕ್ರೋಢೀಕರಿಸಿ ಆದ್ಯತೆಯ ಪ್ರಕಾರ ವಿಷಯಗಳನ್ನು ಆಯ್ಕೆ ಮಾಡಿ ಜೋಡಿಸಿ ಪ್ರಕಟಣಾ ಪೂರ್ವ ಪ್ರತಿಯನ್ನು ಸಿದ್ಧ ಪಡಿಸುವ ಪ್ರಕ್ರಿಯೆಯ ಅವಧಿ, ಇದು ಸವಾಲಿನ ಕೆಲಸವಾದರೂ ತಂಡದ ನಡುವಿನ ಸಂಪರ್ಕ, ಚರ್ಚೆಗಳಿಂದ ಸರಿ ತಪ್ಪುಗಳ ವಿಶ್ಲೇಷಣೆ ನಡೆಸಲಾಗುತ್ತದೆ. ನಂತರ ತಂಡದೊಂದಿಗೆ ಹಂಚಿಕೊಂಡು ಪ್ರೂಫ್ ರೀಡಿಂಗ್ ಪ್ರಕ್ರಿಯಲ್ಲಿ ಸರಿ ತಪ್ಪುಗಳ ತಿದ್ದಪಡಿ ನಡೆಯುತ್ತದೆ. ನಂತರ ತಿಂಗಳ ಮೊದಲ ವಾರದಲ್ಲಿ ಸಾರ್ವಜನಿಕರೊಂದಿಗೆ ಪತ್ರಿಕೆಯನ್ನು ಅಧಿಕೃತವಾಗಿ ಪ್ರಕಟಿಸಿ ಹಂಚಲಾಗುತ್ತದೆ. ಟೆಲಿ ಗ್ರಾಂ, ವಾಟ್ಸಾಪ್, ವೆಬ್ ಸೈಟ್ ಗಳಲ್ಲಿ ಫೇಸ್ ಬುಕ್ ನಲ್ಲಿ ಪ್ರತೀ ತಿಂಗಳ ಮೊದಲ ವಾರದಲ್ಲಿ ಹಲವಾರು ಗುಂಪುಗಳಿಗೆ ಹಂಚುವ ಪ್ರಕ್ರಿಯೆ ನಡೆಸುತ್ತೇವೆ. ವೈಯುಕ್ತಿವಾಗಿ ಕಳುಹಿಸಿ ಕೊಡಿ ಎಂದು ಆಸಕ್ತಿ ತೋರಿದವರಿಗೂ ವೈಯುಕ್ತಿವಾಗಿ ಕಳುಹಿಸಿದ್ದೇವೆ. ಯಕ್ಷಗಾನದಲ್ಲಿ ಗುರುತಿಸಲ್ಪಟ್ಟ ಅಧ್ಯಯನಾತ್ಮಕ ಚಟುವಟಿಕೆ ನಡೆಸುವಂತಹಾ ಪ್ರಮುಖ ಸಂಸ್ಥೆಗಳಿಗೂ ಪತ್ರಿಕೆಯನ್ನು ಮಿಂಚಂಚೆ ಮೂಲಕ ತಲುಪಿಸಿದ್ದೇವೆ. ಒಂದಂದಾಜಿನ ಹಾಗೂ ಪತ್ರಿಕೆಯ ಸಮೀಕ್ಷೆ ಪ್ರಕಾರ ಸಾವಿರಕ್ಕೂ ದಾಟಿ ಓದುಗರನ್ನು ತಲುಪಿದ ಸಾರ್ಥಕತೆ ನಮ್ಮದು. ಪತ್ರಿಕೆ ಪ್ರಾರಂಭವಾದಾಗಿನಿಂದ 12 ಸಂಪುಟಗಳಲ್ಲಿ ಮೂಡಿ ಬಂದ ಲೇಖನಗಳ ಕುರಿತು ಪುನರಾವಲೋಕನ ಮುಂದಿದೆ.

**2022 ಮಾರ್ಚ್ 10ನೇ ತಾರೀಕು:** ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ (ಮಾತೃ ಸಂಸ್ಥೆ) ವಂಡಾರು ಇದರ ವಾರ್ಷಿಕ ಸಭೆಯಲ್ಲಿ ನಾದನೂಪುರ ಪತ್ರಿಕೆ ಹೊರತರುವ ಕುರಿತಾಗಿ ಚರ್ಚೆ. ಟ್ರಸ್ಟ್ ನ ಪದಾಧಿಕಾರಿಗಳಿಂದ ಇದಕ್ಕೆ ಸಹಮತ. ಮಾಧ್ಯಮ ಸಮಾಲೋಚಕರಾಗಿ ಅನುಭವವುಳ್ಳ ಶುಭಾಶಯ ಜೈನ್ ರವರಿಗೆ ಪತ್ರಿಕೆಯನ್ನು ಮುನ್ನಡೆಸುವ ಹೊಣೆಗಾರಿಕೆ ನೀಡಲು ತೀರ್ಮಾನ..

**2022 ಮಾರ್ಚ್ 15ರಿಂದ 20ನೇ ತಾರೀಕು:** ಪತ್ರಿಕೆಗೆ ಲೇಖನ ಹಾಗೂ ಅಂಕಣ ಬರಹಗಾರರಾಗಿ ಪತ್ರಿಕೆಯೊಂದಿಗೆ ಕೈ ಜೋಡಿಸಲು ಹಲವರ ಸಂಪರ್ಕ. ಗೌರವ ಸಂಪಾದಕರಾಗಿ ಪತ್ರಿಕೆಯನ್ನು ಮುನ್ನಡೆಸಲು ಶ್ರೀ ಅಜಿತ್ ಕಾರಂತರೊಂದಿಗೆ ಮಾತುಕತೆ, ನಂತರ ಪ್ರೊ ಉದಯ್ ಕುಮಾರ್ ಶೆಟ್ಟಿ, ಎಂ ಶಾಂತಾರಾಮ ಕುಡ್ವ, ರವಿ ಮಡೋಡಿ, ಸಾಯಿಸುಮಾ ಎಂ ನಾವುಡರ ರೊಂದಿಗೆ ಸಂಪರ್ಕ ಹಾಗೂ ಮಾತುಕತೆ, ಗೌರವ ಸಂಪಾದಕರೊಂದಿಗೆ ಪತ್ರಿಕೆಯ ವಿನ್ಯಾಸ ಹೇಗಿರಬೇಕು ಎಂಬುದರ ಚರ್ಚೆ, ಅಂಕಣಗಳನ್ನು ಗೊತ್ತು ಮಾಡಿಕೊಳ್ಳುವಿಕೆ, ಲೇಖನಗಳನ್ನು ಸಂಗ್ರಹಿಸಿ ಅಂತಿಮ ರೂಪ ನೀಡುವ ಪ್ರಕ್ರಿಯೆ ನಡೆಯಿತು. ಪತ್ರಿಕಾ ವಿನ್ಯಾಸದ ಬಗ್ಗೆ ಟ್ರಸ್ಟ್ ನ ಪದಾಧಿಕಾರಿಗಳೊಂದಿಗೆ ಅಂತಿಮ ಚರ್ಚೆ.

**2022 ಏಪ್ರಿಲ್ 2ನೇ ತಾರೀಕು:** ಏಪ್ರಿಲ್ 2ನೇ ತಾರೀಕಿನಂದು ಆನ್ ಲೈನ್ ಮಾಧ್ಯಮದಲ್ಲಿ ಅಧಿಕೃತವಾಗಿ ನಾದನೂಪುರ ವಂಡಾರು ಡಿಜಿಟಲ್ ಯಕ್ಷ ಪತ್ರಿಕೆಯ ಪತ್ರಿಕೆಯ ಬಿಡುಗಡೆ, ಮತ್ತು ಲೋಕಾರ್ಪಣೆ. ಹಿರಿಯ ಪತ್ರಕರ್ತ, ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಮಾಧವ ಎಂ ಕೆ, ವಿ ಮನೋಹರ್ ಪ್ರಸಾದ್, ಪರ್ತಕರ್ತ ಜಿತೇಂದ್ರ ಕುಂದೇಶ್ವರ, ಪತ್ರಿಕೆಯ ಸಂಪಾದಕರು ಮತ್ತು ಲೇಖಕರು, ಮೊದಲಾದವರ ಉಪಸ್ಥಿತಿಯಲ್ಲಿ ಪತ್ರಿಕೆಯ ಬಿಡುಗಡೆ, ಮೊದಲ ಸಂಚಿಕೆಯ ಅನಾವರಣ. ಈ ಬಗ್ಗೆ ಸ್ಥಳೀಯ ಟಿವಿ ಹಾಗೂ ಪತ್ರಿಕೆಗಳಲ್ಲಿ ವರದಿ.




**2022 ಎಪ್ರಿಲ್ ತಿಂಗಳ ಮೊದಲನೆ ಸಂಚಿಕೆ** ಮೊದಲನೇ ಸಂಚಿಕೆಯಲ್ಲಿ ಕೊರೋನೋತ್ತರ ಯಕ್ಷಗಾನದ ಸ್ಥಿತಿಗತಿ, ಕಾಲಮಿತಿ ಯಕ್ಷಗಾನದ ಸಾಧಕ ಬಾಧಕಗಳು, ಪ್ರಸಂಗ ವಿಹಾರ,

ನವರಸಗಳ ಕುರಿತ ರಸಸ್ಫುರಣೆ, ಮಹಿಳಾ ಸಾಧಕಿ ಲೀಲಾವತಿ ಬೈಪಡಿತ್ತಾಯರ ಯಶೋಗಾಥೆ, ತೆಂಕು ತಿಟ್ಟಿನ ಹಿಮ್ಮೇಳ ಕಲಾವಿದರಾದ ಪದ್ಯಾಣ ಶಂಕರ ನಾರಾಯಣ ಭಟ್, ಹಾಗೂ ಬಡಗಿನ ಹಾಸ್ಯಗಾರ ಹಳ್ಳಾಡಿ ಜಯರಾಮ ಶೆಟ್ಟರ ವ್ಯಕ್ತಿ ಪರಿಚಯ, ಕಟೀಲು ಕ್ಷೇತ್ರ ಮಹಾತ್ಮೆಯ ಪುಸ್ತಕ ಪರಿಚಯ, ಯಕ್ಷ ಸಂವರ್ಧನ ಶಿವಮೊಗ್ಗ ಸಂಸ್ಥೆಯ ಪರಿಚಯ, ಹೀಗೆ ಯಕ್ಷಗಾನದ ವಿವಿಧ ದೃಷ್ಟಿಕೋನಗಳನ್ನು ನೀಡಬಲ್ಲ ಸರ್ವಾಂಗ ಸುಂದರ ಸಂಚಿಕೆ ಮೂಡಿ ಬಂತು.

**2022ರ ಮೇ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಪ್ರಚಲಿತ ವಿಷಯಗಳ ಮೇಲೆ ಓದುಗರ ಬರಹಗಳು ಪ್ರಕಟಗೊಂಡವು. ಓದುಗರಾದ ಬೇಳೂರು ರಾಘವ ಶೆಟ್ಟಿಯವರು ಬರೆದ ಡಿಜಿಟಲೀಕರಣದಿಂದ ಯಕ್ಷಗಾನಕ್ಕೆ ಹಾನಿ, ಲೇಖಕ ಹಾಗೂ ವಿದ್ವಾಂಸರಾದ ಸುರೇಂದ್ರ ಫಣಿಯೂರ್ ರವರು ಬರೆದ ಡಿಜಿಟಲ್ ಮಾಧ್ಯಮ– ಅವಲೋಕನ, ಹಾಗೂ ಕಲಾವಿದರಿಗೆ ತುರ್ತು ನಿಧಿ ಒಂದು ಚಿಂತನೆ, ಮುಂಬೈನಲ್ಲಿ ಯಕ್ಷಗಾನದ ಕವಲು, ಅನನ್ಯ ಪಾತ್ರ ಪರಂಪರೆಯ ಮಲ್ಲ ಜಲವಳ್ಳಿ– ಪರಿಚಯ, ಲೇಖನಗಳು ಪ್ರಟವಾಗಿದ್ದವು.



ದಿನಾಂಕ 02-04-2022 ರ ನಾದ ನೂಪುರ ವಂಡಾರು ಡಿಜಿಟಲ್ ಪತ್ರಿಕೆಯ ಆನ್ ಲೈನ್ ಬಿಡುಗಡೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳು

**2002ರ ಜೂನ್ ತಿಂಗಳ ಸಂಚಿಕೆ:** ಈ ಸಂಚಿಕೆಯು ಯಕ್ಷಗಾನದ ದಂತಕಥೆ ಭಾಗವತ ಕಾಳಿಂಗ ನಾವುಡ ಸಂಸ್ಮರಣೆ ವಿಶೇಷಾಂಕವಾಗಿದ್ದು ಪ್ರೊ. ಉದಯ್ ಕುಮಾರ್ ಶೆಟ್ಟಿಯವರು ಭಾಗವತಿಕೆಯಲ್ಲಿ ಕಾಳಿಂಗ ನಾವುಡ ಮಾರ್ಗ ಎಂಬ ವಿಷಯದ ಬಗ್ಗೆ ಲೇಖನ ನೀಡಿದ್ದರು. ಇದರೊಂದಿಗೆ ಯಕ್ಷಗಾನದೊಳಗೊಂದು ಡಿಜಿಟಲ್ ಕ್ರಾಂತಿ, ಡಿಜಿಟಲ್ ಮಾಧ್ಯಮ ಯಕ್ಷಗಾನಕ್ಕೆ ಪೂರಕವೇ ಮಾರಕವೇ ಎಂಬ ವಿಷಯದ ಬಗ್ಗೆ ಸುರೇಂದ್ರ ಫಣಿಯೂರ್ ಬರೆದ ಲೇಖನ ಪ್ರಕಟವಾಗಿತ್ತು.

**2022ರ ಜುಲೈ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಯಕ್ಷ ರಂಗಾಯಣ ಬೇಕೆ ಎಂಬ ಬಗ್ಗೆ ಸುರೇಂದ್ರ ಪಣಿಯೂರ್, ಹಾಗೂ ಸಂಘಟರ ಮೇಲೆ ವೀಳ್ಯದ ಪ್ರಭಾವ, ಪ್ರಸಂಗ ಶೀರ್ಷಿಗೆ ಬದಲಾವಣೆ ಎಷ್ಟು ಸರಿ? ಎಂಬ ಚಿಂತನಶೀಲ ವಿಷಯಗಳು ಪ್ರಕಟಗೊಂಡವು.

**2022 ರ ಆಗಸ್ಟ್ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಝೀ ಚಾನೆಲ್ ಮೇಲೆ ಮುನಿಸಿನ ಸುತ್ತ, ಯಕ್ಷಗಾನ ಕಲಾವಿದರಿಗೆ ಬಿರುದುಗಳು ಎಷ್ಟು ಅವಶ್ಯ, ಯಕ್ಷಗಾನ ಪ್ರಸಂಗ ಪ್ರಯೋಗ ಲೆಕ್ಕಾಚಾರ, ತಿಂಗಳ ಹೈಲೈಟ್ಸ್ ಆಗಿತ್ತು.

**ಸೆಪ್ಟೆಂಬರ್ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಸ್ವಾತಂತ್ರ್ಯ ದಿನಾಚರಣೆ ವಿಶೇಷವಾಗಿ ಯಕ್ಷಗಾನ ಸ್ವಾತಂತ್ರ್ಯ ಪೂರ್ವದ ನೋಟ, ರಾಷ್ಟ್ರ ಪ್ರೇಮಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆ, ಎಂಬ ಲೇಖನಗಳ ಜೊತೆಗೆ ಬಿಟ್ಟ ಮೈ ವೇಷದ ತಾಂತ್ರಿಕ ಸಮಸ್ಯೆ ಎಂಬ ವಿಮರ್ಶಾ ಲೇಖನ ಮೂಡಿ ಬಂತು.

**ಅಕ್ಟೋಬರ್ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಪಾರ್ತಿ ಸುಬ್ಬ ಪ್ರಶಸ್ತಿ ಹಿನ್ನಲೆ, ದೈವದ ಪಾತ್ರಗಳು ಯಕ್ಷಗಾನಕ್ಕೆ ಪ್ರವೇಶಿಕೆ ಪಡೆದ ಬಗೆ, ಮನೋಹರ್ ಕುಂದರ್ ಚಿತ್ರ ಕಥೆ, ಯಕ್ಷಗಾನ ಪ್ರಸಂಗ ಸಾಹಿತ್ಯ ಮತ್ತು ಪ್ರಕ್ಷಿಪ್ತ ಪ್ರಸಂಗಗಳು ಇವು ಪ್ರಕಟಗೊಂಡ ಪ್ರಮುಖ ಲೇಖನಗಳು,

**ನವಂಬರ್ ತಿಂಗಳ ಪತ್ರಿಕೆ:** ಕನ್ನಡ ರಾಜ್ಯೋತ್ಸವ ವಿಶೇಷ ಸಂಚಿಕೆಯಾಗಿದ್ದು, ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ, ರಾಜ್ಯೋತ್ಸವ ಪ್ರಶಸ್ತಿಗೆ ಲಾಬಿ ಮಾಡಬೇಕೆ? ಎಂಬ ವಿಷಯದ ಸಕಾಲಿಕ ಮಂಡನೆ, ಪ್ರಕಟವಾಯಿತು.

**ಡಿಸೆಂಬರ್ ತಿಂಗಳ ಸಂಚಿಕೆ:** ಈ ಸಂಚಿಕೆಯಲ್ಲಿ, ಪ್ರಸಂಗದಲ್ಲಿ ಮೂಡಿ ಮರೆದ ಏಸು ಚರಿತ್ರೆ, ಕಾಮಿಡಿ ಜರ್ನಿ ಕ್ಯಾದಗಿ ಟು ಬೆಂಗಳೂರು, ಇವು ಪ್ರಕಟಗೊಂಡ ಪ್ರಮುಖ ಲೇಖನಗಳು,

**2023ರ ಜನವರಿ ತಿಂಗಳ ಸಂಚಿಕೆ:** ಈ ತಿಂಗಳಿನಲ್ಲಿ ಯಕ್ಷಗಾನ ಸಾಹಿತ್ಯ ಸಮ್ಮೇಳನ ಅನಿವಾರ್ಯ ಏಕೆ? ಎಂಬುದರ ಬಗ್ಗೆ ಸವಿಸ್ತಾರ ಲೇಖನ ಪ್ರಕಟವಾಯಿತು.

**2023ರ ಫೆಬ್ರವರಿ ತಿಂಗಳ ಸಂಚಿಕೆ:** ಈ ತಿಂಗಳ ಸಂಚಿಕೆಯಲ್ಲಿ ಯಕ್ಷಗಾನ ಸಮ್ಮೇಳನ ಅಧ್ಯಕ್ಷರ ಮನದಾಳ, ಸಂದರ್ಶನ ರೂಪದ ಲೇಖನ ಹಾಗೂ ಯಕ್ಷಗಾನ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ಇವು ಮುಖ್ಯ ಲೇಖನಗಳಾಗಿ ಮೂಡಿ ಬಂದವು.

**2023ರ ಮಾರ್ಚ್ ತಿಂಗಳ ಸಂಚಿಕೆ:** ಈ ತಿಂಗಳ ಪತ್ರಿಕೆಯಲ್ಲಿ ಯಕ್ಷಗಾನ ರಾಜ್ಯ ಸಮ್ಮೇಳನದ ಗೋಷ್ಠಿಯ ಅನುಭವ ಲೇಖನ – ಯಕ್ಷಗಾನ ಕನ್ನಡದ ಅಸ್ಮಿತೆಯ ಕುರಿತು ಡಾ, ದಿನಕರ್ ಪಚ್ಚನಾಡಿ, ಬಲಿಪ ನಾರಾಯಣ ಭಾಗವರ ಮತ್ತು ಯಕ್ಷಗಾನ ಕವಿ ಅಂಬಾತನಯ ಮುದ್ರಾಡಿಯವರ ಸ್ಮರಣೆ ಹಾಗೂ ಯಕ್ಷ ಕೃತಿಗಳ ಪರಿಚಯ ಲೇಖನ, ತಾಳಮದ್ದಳೆಯಲ್ಲಿ ಅರ್ಥಗಾರಿಕೆಗೆ ಬೇಕಾದ ಅಂಶಗಳು ಈ ವಿಷಯ ಪ್ರಮುಖ ಲೇಖನಗಳಾಗಿ ಪ್ರಕಟವಾಯಿತು.

**ಮಹಿಳಾ ಸಾಧಕಿಯರ ಅಂಕಣ:** ಇವಿಷ್ಟೇ ಅಲ್ಲದೆ, ಮಹಿಳಾ ಸಾಧಕಿಯರ ಅಂಕಣದಲ್ಲಿ ನರ್ಮದಾ ಶಿಬರೂರಾಯ, ಅಕ್ಕಾಣಿಯಮ್ಮ, ಶ್ರೀಮತಿ ಮೂಕಾಂಬಿಕಾ ವಾರಂಬಳ್ಳಿ, ರತ್ನಾವತಿ ಶಿರಂತಡ್ಕ, ರತ್ನಾವತಿ ಹೆಚ್ ಎಂ ತಲಂಜೇರಿ, ಪೂರ್ಣಿಮಾ ಯತೀಶ್ ರೈ, ಶ್ರೀಮತಿ ಟಿ ಎನ್ ಜ್ಯೋತಿ ಕಳಸ, ಶ್ರೀಮತಿ ಮಾಲತಿ ವೆಂಕಟೇಶ್ ರಾವ್, ಸುಮಂಗಲಾ ರತ್ನಾಕರ್ ರಾವ್, ಯೋಗಾಕ್ಷಿ ಗಣೇಶ್ ತಳಕಳ ಇಂತಹ ತೆರೆಮರೆಯ ಸಾಧಕಿಯರ ಕಲಾ ಸೇವೆಗಳು ಅನಾವರಣಗೊಂಡವು.

**ಯಕ್ಷ ಜೀವನದ ಮೆಲುಕು:** ಕಲಾವಿದರ ಯಕ್ಷ ಜೀವನದ ಮೆಲುಕಿನ ಕಾಡುವ ಪಾತ್ರಗಳು ಅಂಕಣದಲ್ಲಿ ಕುಮುಟಾ ಗಣಪತಿ ನಾಯಕ್, ಮುಖ್ಯ ಪ್ರಾಣ ಕಿನ್ನಿಗೋಳಿ, ದಿನೇಶ್ ಅಮ್ಮಣ್ಣಾಯ, ಸೀತೂರು ಅನಂತ ಪದ್ಮನಾಭ, ನರಾಡಿ ಭೋಜರಾಜ ಶೆಟ್ಟಿ, ಚಂದ್ರಕುಮಾರ್ ನೀರ್ಜೆಡ್ಡು,

ಜನಾರ್ಧನ ಮಂಡಗಾರ್ ಶೃಂಗೇರಿ, ಚೆನ್ನಪ್ಪ ಗೌಡ ಸಜಿಪ (ಸ್ವಾತಂತ್ರ್ಯ ಪೂರ್ವದ ಕಲಾವಿದರು), ಕೆದಿಲ ಜಯರಾಮ್ ಭಟ್, ಅಂಬಾಪ್ರಸಾದ್ ಭಟ್ ಪಾತಾಳ, ದಯಾನಂದ ನಾಗೂರ್, ಸಿದ್ಧಕಟ್ಟೆ ಸದಾಶಿವ ಶೆಟ್ಟಿ, ಅಜ್ರಿ ಗೋಪಾಲ ಗಾಣಿಗ, ಪೂಕಳ ಲಕ್ಷ್ಮೀ ನಾರಾಯಣ ಭಟ್, ಎಂ ಎ ನಾಯಕ್ ಮಂದಾರ್ತಿ, ಕೆಪಿ ಹೆಗಡೆ, ಚಿದಂಬರ ಬಾಬು, ಬೆಲ್ತೂರ್ ರಮೇಶ್, ಬೆಳ್ಳಾರೆ ಮಂಜುನಾಥ ಭಟ್, ಸಂಜಯ್ ಕುಮಾರ್ ಶೆಟ್ಟಿ ಗೋಣಿಬೀಡು, ಯಳಬೇರು ಶೇಖರ್ ಶೆಟ್ಟಿ ಮೊದಲಾದ ಕಲಾವಿದರ ಯಕ್ಷಾನುಭವಗಳ ಪರಿಚಯದ ಸರಣಿ ಮೂಡಿ ಬಂತು.

**ವಿಶಿಷ್ಟ ಸಾಧಕರ ಸರಣಿ:** ಪ್ರೊ ಉದಯ್ ಕುಮಾರ್ ಶೆಟ್ಟಿ ಯವರ ಅಂಕಣದಲ್ಲಿ ಯಕ್ಷಗಾನದ ವಿಶಿಷ್ಟ ಸಾಧಕರ ಸರಣಿಯಲ್ಲಿ ಕಡತೋಕ ಮಂಜುನಾಥ ಭಾಗವತ, ಮಜ್ಜಿಗೆ ಬೈಲು ಆನಂದ ಶೆಟ್ಟಿ, ನೆಲ್ಲೂರು ಮರಿಯಪ್ಪಾಚಾರ್, ಯಕ್ಷ ರಂಗದ ಜ್ವಾಲೆ ಅರಾಟೆ ಮಂಜುನಾಥ, 60 ರ ಅಭಿಜಾತ ಕಲಾವಿದ ತೀರ್ಥಹಳ್ಳಿ ಗೋಪಾಲ ಆಚಾರ್ಯ, ಬಡಗು ರಂಗಸ್ಥಳದಲ್ಲಿ ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟಿ, ನಡುತಿಟ್ಟಿನ ಆಶಾಕಿರಣ– ಕೋಟ ಸುರೇಶ್ ಬಂಗೇರ, ಚೆಂಡೆಯ ಮಾಂತ್ರಿಕ – ರಾಮಕೃಷ್ಣ ಮಂದಾರ್ತಿಯವರ ಪಾತ್ರ ವೈಶಿಷ್ಟ್ಯತೆಗಳು ಅನಾವರಣಗೊಂಡವು.

**ನಮ್ಮ ಲೈಬ್ರರಿ:** ನಮ್ಮ ಲೈಬ್ರರಿ ಅಂಕಣದಲ್ಲಿ ಅಂಗದ ಸಂಧಾನ, ಅತಿಕಾಯ ಕಾಳಗ, ಯಕ್ಷಗಾನ ಪ್ರಸಂಗಗಳಲ್ಲಿ ಕರ್ಣ, ಯಕ್ಷಗಾನ ಪ್ರಸಂಗಗಳಲ್ಲಿ ದ್ರೌಪದಿ, ಭಸ್ಮಾಸುರ ಮೋಹಿನಿ, ಪ್ರಸಂಗ ಸಾಹಿತ್ಯ, ಚಂದ್ರಹಾಸ ಚರಿತ್ರೆ ಯಕ್ಷಗಾನ ಪ್ರಸಂಗ, ಹಟ್ಟಿಯಂಗಡಿ ರಾಮಭಟ್ಟರ ಕವಿ ಕೃತಿ ಪರಿಚಯ, ದೇವಿದಾಸ ಕವಿಯ ಯಕ್ಷಗಾನ ಪ್ರಸಂಗಗಳು, ಜೈಮಿನಿ ಭಾರತ ಆಧಾರಿತ ಯಕ್ಷಗಾನ ಪ್ರಸಂಗಗಳ ವಿವರ ಪ್ರಕಟವಾಯಿತು.

**ಇತರ ಲೇಖನಗಳು**: ಎಂ ಕೆ ರಮೇಶ್ ಆಚಾರ್ಯರ ರಂಗ ಮಾರ್ಗದರ್ಶಿ, ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಸುದ್ದಿ, ಪದ್ಮನಾಭ ಮರಕಡ ಕಳುಹಿಸದ ಸುದ್ದಿ ಮರಕಡ ಗಣೇಶೋತ್ಸವ ಶೋಭಾಯಾತ್ರೆಯಲ್ಲಿ ಯಕ್ಷಗಾನ– ವಿಶಿಷ್ಟ ಪ್ರಯೋಗ, ಓದುಗರಾದ ಬೇಳೂರು ರಾಘವ ಶೆಟ್ಟಿಯವರ ಪೂರ್ವರಂಗವೇ ನಿಜವಾದ ಬೆಳಕಿ ಸೇವೆ ಎಂಬ ವಿಷಯದ ಲೇಖನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – ಸಾಧಕರ ಪರಿಚಯ, ಕಂಬನಿ – ಕುಂಬ್ಳೆ ಸುಂದರ್ ರಾವ್ ನಿಧನ ವಾರ್ತೆ, ಕಂಬನಿ – ಗುರುವಪ್ಪ ಬಾಯಾರು, ಚಿನ್ನದ ಅಳಿಲು ಪ್ರಸಂಗ ಬಿಡುಗಡೆಯ ವರದಿ, ಶಿರೂರು ಫಣಿಯಪ್ಪಯ್ಯ ಯಕ್ಷಗಾನ ಸಂಪುಟ ಬಿಡುಗಡೆ ಹಾಗೂ ಫಣಿಗಿರಿ ಪ್ರಶಸ್ತಿ ಪ್ರದಾನ ಸಮಾರಂಭ, ಶಿರೂರು ಫಣಿಯಪ್ಪಯ್ಯ ಪ್ರಸಂಗ ಪ್ರದರ್ಶನ – ಕೋಟೇಶ್ವರ ಕೊಡಿ ಹಬ್ಬದ ದಿನ ಕೋಟಿ ಲಿಂಗೇಶ್ವರ ಕಲಾಬಳಗದಿಂದ ವಾಜಿ ಗ್ರಹಣ ಹಾಗೂ ಹಂಗಾರಕಟ್ಟೆ ಐರೋಡಿ ಯಕ್ಷಗಾನ ಕಲಾಕೇಂದ್ರದವರಿಂದ ಸತಿ ನಯನಾವತಿ ಪ್ರಸಂಗ ಬಿಡುಗಡೆಯ ವರದಿ ಪ್ರಕಟಗೊಂಡವು.

**ಯಕ್ಷ ಸಂಸ್ಥೆಯ ಪರಿಚಯ ಅಂಕಣ:** ಸಂಸ್ಥೆಯ ಪರಿಚಯ ಅಂಕಣದಲ್ಲಿ ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ ಚಿಕ್ಕಮಗಳೂರು, ಮೊಗವೀರ ವ್ಯವಸ್ಥಾಪನಾ ಮಂಡಳಿ, ಮುಂಬೈ, ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಸಂಸ್ಥೆಗಳ ಪರಿಚಯ ಲೇಖನಗಳು ಮೂಡಿ ಬಂದಿವೆ.

ಒಂದು ವರ್ಷದ 12 ಸಂಚಿಕೆಗಳನ್ನು ಓದಲು ಇಚ್ಛಿಸುವವರು https://nyt.1ngo.in/ ಈ ವೆಬ್ ಸೈಟ್ ಗೆ ಭೇಟಿ ನೀಡಿ, ಪತ್ರಿಕೆಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. ಒಂದು ವರ್ಷದ ನಮ್ಮೀ ಪಯಣದಲ್ಲಿ ನಮ್ಮ ಜತೆಯಾದ ಸಮಸ್ತ ಓದುಗರಿಗೆ ಮತ್ತೊಮ್ಮೆ ಅಂತರಾಳದ ಕೃತಜ್ಞತೆಗಳು.

---

## ವಸ್ತುನಿಷ್ಠ, ಪ್ರಬುದ್ಧ, ಮೌಲಿಕ, ಲೇಖನಗಳೆ ಪತ್ರಿಕೆಯ ಜನಪ್ರಿಯತೆಗೆ ಕಾರಣ

ನಾದನೂಪುರ ಯಕ್ಷೋತ್ಥಾನ ಟ್ರಸ್ಟ್‌ನ ಅಂಗಸಂಸ್ಥೆಯಾದ "ನಾದನೂಪುರ ವಂಡಾರು" ವೆಬ್ ಪತ್ರಿಕೆಯು, ತನ್ನ ಒಂದು ವರ್ಷ ದಾಟಿದೆ ಎಂಬುದು ಸಂತಸದ ವಿಷಯ. ಪತ್ರಿಕೋದ್ಯಮದಲ್ಲಿ ಒಂದು ಗಾದೆಯ ಮಾತಿದೆ. "ಪತ್ರಿಕೋದ್ಯಮದಲ್ಲಿ ಪತ್ರಿಕೆಗಳು ಹೇಗೆ ಪ್ರಾರಂಭವಾಗುತ್ತದೋ, ಅಷ್ಟೇ ವೇಗದಲ್ಲಿ ನಿಂತೂ ಹೋಗುತ್ತದೆ" ಎಂಬುದು. ಆದರೆ ನಮ್ಮ ನಾದನೂಪುರ ಇದಕ್ಕೊಂದು ಅಪವಾದ. ಯಾವುದೇ ಪತ್ರಿಕೆಯು ಯಶಸ್ವಿಯಾಗಬೇಕಾದರೆ, ಪತ್ರಿಕೆಯ ಗುಣಮಟ್ಟ ಉತ್ತಮವಾಗಿರಬೇಕು, ಪತ್ರಿಕಾ ವರದಿಗಳು ಹಾಗೂ ಅಂಕಣಗಳು ವಸ್ತುನಿಷ್ಠವಾಗಿರಬೇಕು, ಪ್ರಬುದ್ಧ ಹಾಗೂ ಮೌಲಿಕವಾದ ಬರಹಗಳಿರಬೇಕು ಎಂಬುದು ಪ್ರಾಥಮಿಕ ಅಂಶಗಳು ಹೌದು. ಆದರೆ, ಇದಕ್ಕಿಂತಲೂ ಅತ್ಯವಶ್ಯಕವಾಗಿ ಬೇಕಾದುದು ಜಾಹೀರಾತುಗಳು ಎಂಬುದೂ ಸತ್ಯದ ವಿಚಾರ. ಏಕೆಂದರೆ, ಪತ್ರಿಕೋದ್ಯಮ ನಡೆಸುವುದೆಂದರೆ ಅತ್ಯಂತ ಕಷ್ಟದ ಕೆಲಸ. ಪತ್ರಿಕೆ ಪ್ರಕಟನೆಗಾಗಿ ಮುಖ್ಯವಾಗಿ ಬೇಕಾಗಿರುವುದು ಹಣಕಾಸು ವ್ಯವಸ್ಥೆ. ಈ ಹಣಕಾಸು ಒದಗಿ ಬರುವ ಮುಖ್ಯ ಮೂಲವೆಂದರೆ ಜಾಹಿರಾತು ಮಾತ್ರ. ಇದು ವಾಸ್ತವಿಕ ವಿಷಯ ಆಗಿರುವಾಗ, "ನಾದನೂಪುರ ವಂಡಾರು" ಪತ್ರಿಕೆ ಇಂದು ತನ್ನ ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿದೆ ಎಂದರೆ, ಅದಕ್ಕೆ ಮುಖ್ಯ ಕಾರಣವೆಂದರೆ, ಪತ್ರಿಕಾ ಸಂಪಾದಕರ ದೂರದೃಷ್ಟಿ ಧೋರಣೆ ಹಾಗೂ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ, ವಿವಿಧ ಕ್ಷೇತ್ರಗಳ ಪ್ರತಿಭಾನ್ವಿತ ಲೇಖಕರ ಚಿಂತನಾಯುಕ್ತವಾಗಿರುವ, ಪ್ರಬುದ್ಧ ಲೇಖನಗಳು ಎಂಬುದು ನಿರ್ವಿವಾದ. ನಾದನೂಪುರ ಪತ್ರಿಕೆ ಆರಂಭವಾದ ದಿನದಿಂದ, ಇಂದಿನ ತನಕವೂ ನಾನು ಲೇಖನಗಳನ್ನು ಬರೆದುದು ನಾದನೂಪುರ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂಬ ಆತ್ಮತೃಪ್ತಿ ನನಗಿದೆ.

ಪತ್ರಿಕೋದ್ಯಮದಲ್ಲಿ ಅಪಾರ ಅನುಭವವುಳ್ಳ ಶುಭಾಶಯ ಜೈನ್ ರವರು ಸಂಪಾದಕರಾಗಿ ತೊಡಗಿಸಿದ ಕಾರ್ಯ ಕ್ಷಮತೆ ಈ ಯಶಸ್ಸಿನ ಹಿಂದಿನ ಬೆನ್ನೆಲುಬು. ಪತ್ರಿಕೆಯ ಮುಖ್ಯಸ್ಥರಾದ ವಂಡಾರು ಗೋವಿಂದರ ಆಸಕ್ತಿಯು, ಈ ಪತ್ರಿಕೆಯ ಒಂದು ವರ್ಷ ಪೂರೈಸಲು ಮುಖ್ಯ ಕಾರಣ ಎನ್ನಲೇಬೇಕು. ನಾನು ಇತ್ತೀಚೆಗೆ, ಲೇಖನಗಳನ್ನು ಬರೆಯುವಲ್ಲಿ ವಿಮುಖನಾಗಿದ್ದೆ. ಆದರೂ ಶುಭಾಶಯ ಜೈನ್ ರವರು, ಪ್ರತೀ ತಿಂಗಳೂ ಕರೆ ಮಾಡಿ, ಕೆಲವೊಮ್ಮೆ ಪೀಡಿಸಿ (ಈ "ಪೀಡಿಸಿ" ಎಂಬ ಶಬ್ದಪ್ರಯೋಗ ಸಾಧುವಲ್ಲ. ಆದರೂ ಶುಭಾಶಯ ಜೈನ್ ರವರು "ಸಂಪಾದಕರು" ಎಂಬ ಹುದ್ದೆಯನ್ನು ಅದೆಷ್ಟು ಬದ್ಧತೆಯಿಂದ ಮಾಡಿದ್ದಾರೆ ಎಂಬ ಮೂಲೋದ್ದೇಶ ಇದರ ಹಿಂದಿದೆ ಎಂಬ ಆಶಯ ವ್ಯಕ್ತ ಪಡಿಸಲು ಈ ಶಬ್ದ ಪ್ರಯೋಗ ಎಂಬುದನ್ನು ಓದುಗರು ಗಮನಿಸಬೇಕು) ಲೇಖನವನ್ನು ಬರೆಯಲು ನನ್ನನ್ನು ಪ್ರೇರೇಪಿಸಿದವರು. ಹಾಗಾಗಿಯೇ, ನಾದನೂಪುರ ಪತ್ರಿಕೆಗಾಗಿ ನಾನು ಪ್ರತೀ ತಿಂಗಳೂ, ನನ್ನ ಬಿಡುವಿಲ್ಲದ ಕಾಲದಲ್ಲೂ ಬಿಡುವು ಮಾಡಿ ಲೇಖನ ಬರೆದಿದ್ದೇನೆ, ಆ ಮೂಲಕ "ನಾದನೂಪುರ" ಪತ್ರಿಕೆಯ ಯಶಸ್ಸಿಗೆ ನನ್ನದೂ ಕೊಡುಗೆಯಿದೆ ಎಂಬ ಸಂತೃಪ್ತಿ ನನ್ನದು. ನಾದನೂಪುರ ಪತ್ರಿಕೆಯು ಹಲವಾರು ಸುಪ್ರಸಿದ್ಧ ಲೇಖಕರ ಪ್ರಬುದ್ಧ ಲೇಖನಗಳನ್ನು ಪ್ರಕಟಿಸಿವೆ. ಪತ್ರಿಕೆಯು ಆಯಾಯ ಕ್ಷೇತ್ರದಲ್ಲಿ ಪರಿಣತರಾಗಿರುವ


ಎಂ.ಶಾಂತರಾಮ ಕುಡ್ವ

ಖಾಯಂ ಅಂಕಣಕಾರರನ್ನು ಹೊಂದಿದೆ. ಯಕ್ಷಗಾನ ಸಂಬಂಧೀ ಲೇಖನಗಳು ಸಾಕಷ್ಟು ನಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಯಕ್ಷಗಾನ ಪ್ರಸಂಗಗಳ ಅವಲೋಕನ, ತೆಂಕು, ಬಡಗು, ಬಡಾಬಡಗು ಮುಂತಾದ ಯಕ್ಷಗಾನ ಪ್ರಬೇಧಗಳ ಪರಿಚಯಾತ್ಮಕ ಲೇಖನ, ಸುಪ್ರಸಿದ್ಧ ಕಲಾವಿದರನ್ನು ಮುಂದಿನ ಜನಾಂಗವೂ ಸ್ಮರಿಸಬೇಕೆಂಬ ಕಳಕಳಿಯೊಂದಿಗೆ ಸುಪ್ರಸಿದ್ಧ ಯಕ್ಷಗಾನ ಸಾಧಕರ ಕುರಿತಾದ ಲೇಖನ, ಯಕ್ಷಗಾನ ಸವ್ಯಾಪಸವ್ಯಗಳಿಗೆ ಕ್ಷ–ಕಿರಣ ಬೀರಬಲ್ಲ ವಿಮರ್ಶಾತ್ಮಕ ಲೇಖನಗಳು, ಯಕ್ಷಗಾನವು ವಿಶ್ವಗಾನ ಆಗಬೇಕೆಂಬ ಕಾಳಜಿಯುಕ್ತ ಬರಹಗಳು ಮುಂತಾದವು ನಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿಕೊಂಡಾಗ, ಯಕ್ಷಗಾನಕ್ಕೆ ಮಾನ್ಯತೆ ಕೊಡುವಲ್ಲಿ ನಮ್ಮ ಪತ್ರಿಕೆ ಮುಂಚೂಣಿಯಲ್ಲಿದೆ ಎಂಬುದು ಸಂತಸದ ವಿಷಯ. ನಾದನೂಪುರ ಪತ್ರಿಕೆಯು ಕಲೋಚಿತ ಹಾಗೂ ಕಾಲೋಚಿತ ಲೇಖನಗಳನ್ನು ಪ್ರಕಟಿಸಿದೆ.

ವಿಶೇಷ ಸಂದರ್ಭವನ್ನು ಪರಿಗಣಿಸಿ, ಕೂಡಲೇ ಸ್ಪಂದಿಸಿ, ಆ ಸಂದರ್ಭಕ್ಕೆ ಸರಿ ಹೊಂದುವ ಹಲವಾರು ಉತ್ತಮ ಲೇಖನಗಳನ್ನು ಲೇಖಕರು ಬರೆದು, ಸಾರಸ್ವತ ಲೋಕದ ರಸಿಕರನ್ನು ತಲುಪುವಲ್ಲಿ ಅತ್ಯಂತ ಯಶಸ್ವಿಯಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳೂ ಪ್ರಬುದ್ಧವಾಗಿದ್ದ ಕಾರಣ, ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ.

ಪತ್ರಿಕೋದ್ಯಮ ನಡೆಸುವುದೆಂದರೆ ಅತ್ಯಂತ ಕಷ್ಟಕರ ಕೆಲಸ. ಲೇಖನಗಳನ್ನು ಒದಗಿಸುವುದರೊಂದಿಗೆ ಜಾಹೀರಾತುಗಳು ಸಿಕ್ಕರೆ ಮಾತ್ರ ಪತ್ರಿಕೋದ್ಯಮ ಯಶಸ್ವಿಯಾಗುತ್ತದೆ. ಆದರೆ, ನಾದನೂಪುರ ಪತ್ರಿಕೆಯು ವೆಬ್ ಪತ್ರಿಕೆಯಾದ ಕಾರಣ, ಆರ್ಥಿಕ ಕ್ರೋಢೀಕರಣಕ್ಕೆ ಅಷ್ಟೊಂದು ತೊಂದರೆಯಾಗಲಿಲ್ಲ ಎನ್ನಬಹುದು. ನಾದನೂಪುರ ಪತ್ರಿಕೆ ಯಶಸ್ವಿಯಾಗಲು ಸಂಪಾದಕ ಮಂಡಳಿಯವರ ಶ್ರಮ ಮಹತ್ವದ್ದು.

ಪತ್ರಿಕೆಯ ಮುಖ್ಯಸ್ಥರಾದ ವಂಡಾರು ಗೋವಿಂದ, ಸಂಪಾದಕರಾದ ಶುಭಾಶಯ ಜೈನ್, ಅಜಿತ್ ಕಾರಂತ್, ಪ್ರೊ. ಉದಯಕುಮಾರ್ ಶೆಟ್ಟಿ, ರವಿ ಮಾಡೋಡಿ, ಸಾಯಿಸುಮಾ ನಾವುಡ, ಉಮೇಶ್ ಶಿರೂರು ಮುಂತಾದವರು ಚೆನ್ನಾಗಿ ದುಡಿದಿದ್ದಾರೆ. ಶುಭಾಶಯ ಜೈನ್ ರವರ ಕಾರ್ಯ ವೈಖರಿ ಮೆಚ್ಚುಗೆ ಮೂಡಿಸುವಂತಹುದು. ಪತ್ರಿಕೆಯು ಸಕಾಲದಲ್ಲಿ ಓದುಗರನ್ನು ತಲುಪಿಸುವಲ್ಲಿ, ಲೇಖಕರನ್ನು ನೆನಪಿಸಿ ಲೇಖನಗಳನ್ನು ಸೂಕ್ತ ಸಮಯದಲ್ಲಿ ಪಡೆಯುವಲ್ಲಿ ಶುಭಾಶಯ ಜೈನ್ ರವರು ಲವಲವಿಕೆಯಿಂದ ಕಾರ್ಯ ಎಸಗಿದ್ದಾರೆ. ಲೇಖಕರ ಬಳಗವೂ ಶ್ರದ್ಧೆಯಿಂದ ಲೇಖನಗಳನ್ನು ಬರೆದು ನಾದನೂಪುರ ಪತ್ರಿಕೆಯ ಯಶಸ್ಸಿಗೆ ಕಾರಣರಾಗಿದ್ದಾರೆ. ಇದೀಗ ತನ್ನ ಪ್ರಥಮ ಸಂವತ್ಸರ ಪೂರೈಸಿರುವ ಸಂಭ್ರಮದಲ್ಲಿರುವ ನಾದನೂಪುರ ಪತ್ರಿಕೆಯಲ್ಲಿ ನಾನೂ ಕೂಡಾ ಓರ್ವ ಲೇಖಕನಾಗಿರುವುದು ನನಗೆ ಹೆಮ್ಮೆ ಮೂಡಿಸಿದೆ ಎಂಬುದು ಸತ್ಯದ ಮಾತು.

ಪತ್ರಿಕಾ ರಂಗದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದ "ನಾದನೂಪುರ ಪತ್ರಿಕೆ"ಯು ಇನ್ನಷ್ಟು ಸಾಧಿಸಿ ತನ್ಮೂಲಕ ಸಾರಸ್ವತ ಲೋಕದಲ್ಲಿ ಗುರುತಿಸುವ ಮಟ್ಟಕ್ಕೆ ಏರಲಿ ಎಂದು ಈ ಪ್ರಥಮ ಸಂವತ್ಸರ ಪೂರೈಕೆಯ ಈ ಸಂದರ್ಭದಲ್ಲಿ ಹಾರೈಸುತ್ತೇನೆ. – ***ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

---

# ಡಿಜಿಟಲ್ ಮಾಧ್ಯಮದಲ್ಲಿ ನಾದ ನೂಪುರ ವಂಡಾರು ನಿಯತಕಾಲಿಕದ ಯಶಸ್ಸು


ಸಾಯಿಸುಮಾ ಎಂ. ನಾವಡ

"ನಾದ ನೂಪುರ" ಇದು ಯಕ್ಷನೂಪುರದ ನಾದ. ಯಕ್ಷಗಾನದ ಸದಭಿರುಚಿಯ ಓದುಗರಿಗಾಗಿ ತೆರೆದುಕೊಂಡ ಪತ್ರಿಕೆಯಿದು. ಯಕ್ಷಗಾನ ಪ್ರಪಂಚದಲ್ಲಿ ಡಿಜಿಟಲ್ ಮೂಲಕ ನವೀನ ಪ್ರಯೋಗ. ಮನುಷ್ಯ ಪ್ರಯೋಗಗಳಿಗೆ ಅಷ್ಟು ಸುಲಭವಾಗಿ ತೆರೆದುಕೊಳ್ಳುವುದಿಲ್ಲ. ಕಾರಣ ಪ್ರಯೋಗದ ನಂತರ ಪರಿಸ್ಥಿತಿ ಕೆಡಬಾರದಲ್ಲಾ ಅಂತ. ಆದರೆ ಯಾವುದರ ಕುರಿತೂ ಚಿಂತಿಸದೇ 'ನಾದನೂಪುರ ಯಕ್ಷೋತ್ಥಾನ ಟ್ರಸ್ಟ್, ವಂಡಾರು ಹೆಜ್ಜೆಯಿಟ್ಟದ್ದು ನೂಪುರದ ನಾದದೊಂದಿಗೆ ಡಿಜಿಟಲ್ ಲೋಕಕ್ಕೆ. ಗೋವಿಂದ ವಂಡಾರು ಅವರ ಮುಂದಾಳತ್ವ, ಶುಭಾಶಯ ಜೈನ್ ಅವರ ಸಂಪಾದಕತ್ವ ಈ ಡಿಜಿಟಲ್ ಪತ್ರಿಕೆ ಒಂದು ವ ಮಾಡಿರುವುದಂತೂ ಅಕ್ಷರಶಃ ಸತ್ಯ. ಪತ್ರಿಕೆಯೊಂದು ಕೈಯಲ್ಲಿರುವಾಗಲೇ ಓದುವವರ ಸಂಖ್ಯೆ ಕಡಿಮೆ ಎನ್ನುವುದು ನಿಜ. ಆದರೆ ಖರ್ಚಿಲ್ಲದಂತೆ ಯಕ್ಷಗಾನದ ಅನೇಕ ವಿಚಾರಗಳನ್ನು ತಲುಪಿಸುವುದಕ್ಕೆ ಹೊರಟ ಈ ತಂಡದ ಶ್ರಮ ಅಭಿನಂದನೀಯ.

ಮಹಿಳಾ ಯಕ್ಷಗಾನ ಸಾಧಕಿಯರ ಬಗ್ಗೆ ಲೇಖನವನ್ನು ಈ ಪತ್ರಿಕೆಗೆ ಬರೆಯಬಹುದಾ ಎಂಬ ಕರೆ ಬಂದಾಗ ಒಂದಿನಿತೂ ಯೋಚಿಸದೇ ಒಪ್ಪಿಕೊಂಡವಳು ನಾನು. ಬರೆಯುವ ಬಗ್ಗೆ ಆಸಕ್ತಿ ನನಗಿದ್ದರೂ ಸ್ವಲ್ಪ ಔದಾಸೀನ್ಯವೂ ಆವರಿಸಿಕೊಳ್ಳುತ್ತಾ ಇದ್ದದ್ದರಿಂದ ಅಲ್ಲೊಂದು, ಇಲ್ಲೊಂದು ಲೇಖನ ಬರೆಯುತ್ತಿದ್ದೆನಷ್ಟೇ. ಬದುಕಲು ಮನವಿದ್ದವನಿಗೆ ಹುಲ್ಲುಕಡ್ಡಿಯ ಆಸರೆ ಎಂಬಂತೆ, ಸಮಾನ ಮನಸ್ಕರಿಂದ ಹೊರಟ ಈ ಪತ್ರಿಕೆ ನನ್ನಂತಹವಳಿಗೆ ಬೆಳವಣಿಗೆಗೆ ಪೂರಕವಾದೀತು ಎಂಬ ಸ್ವಾರ್ಥ ನನ್ನಲ್ಲಿತ್ತು. ಅದು ಸತ್ಯವಾಗಿದೆ ಕೂಡ. ಈ ವರ್ಷ ಒಟ್ಟು ಹನ್ನೊಂದು ಯಕ್ಷಸಾಧಕಿಯರ ಬಗ್ಗೆ ಬರೆದೆನಷ್ಟೇ. ಇನ್ನೂ ಅನೇಕರಿದ್ದಾರೆ. ಮುಂದೆ ಬರೆಯುವೆ ಕೂಡ.

ಈ ಪತ್ರಿಕೆ ಆದದ್ದು ಒಂದು ವರ್ಷವಾದರೂ ಕೂಡ ಇಲ್ಲಿ ಬರೆಯುವ ಲೇಖಕರ ಅನುಭವ ಬಹಳ ಶ್ರೇಷ್ಠವಾದದ್ದು. ಯಕ್ಷಗಾನ ಕ್ಷೇತ್ರದ ವಿಚಾರಗಳನ್ನು ಬಹಳಷ್ಟು ಅರಿತುಕೊಂಡವರು. ಇಂತಹವರ ಮಧ್ಯೆ ನಾನೊಂದು ಬಿಂದುವಾಗಿ ಸೇರಿಕೊಳ್ಳಲು ಸಿಕ್ಕ ಅವಕಾಶ ಮಾತ್ರ ಹಿರಿದು. ಅದಕ್ಕೆ ನಾನು ಕೃತಜ್ಞೆ, ಈ ಪತ್ರಿಕೆಯ ನಾದ ಎಲ್ಲ ಯಕ್ಷಾಸಕ್ತ ಕಿವಿಗಳಿಗೆ ಕೇಳಿಸಲಿ, ಅನುರಣಿಸಲಿ ಎಂಬ ಆಶಯವಷ್ಟೇ ನನ್ನದು.

ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು

# ನಾದ ನೂಪುರ ಸಂಗ್ರಹಯೋಗ್ಯ ಸಂಚಿಕೆಗಳು



**ಉಮೇಶ ಶಿರೂರು**

ನಾದನೂಪುರ ಯಕ್ಷ ಪತ್ರಿಕೆ ಡಿಜಿಟಲ್ ರೂಪದಲ್ಲಿ ಏಪ್ರಿಲ್ 02, 2022ರಂದು ಲೋಕಾರ್ಪಣೆಗೊಂಡು ಒಂದು ವರ್ಷದಿಂದ ಯಶಸ್ವಿಯಾಗಿ ಕ್ಲಪ್ತ ಸಮಯದಲ್ಲಿ ಪ್ರಕಟವಾಗುತ್ತಿದ್ದು ವಿಶಿಷ್ಟ ಪತ್ರಿಕೆಯಾಗಿ ಜನ ಮನ್ನಣೆ ಗಳಿಸಿದೆ. ಯಕ್ಷಗಾನ ಕಲಾವಿದ ವಂಡಾರು ಗೋವಿಂದ ಅವರ ನಾಯಕತ್ವದ ಈ ಪತ್ರಿಕೆ ಶುಭಾಶಯ ಜೈನ ಅವರ ಸಂಪಾದಕತ್ವದಲ್ಲಿ ಅಜಿತ್ ಕಾರಂತರ ಮಾರ್ಗದರ್ಶನದಲ್ಲಿ ಯಕ್ಷಗಾನ ರಂಗದ ಹಿರಿಯ ಲೇಖಕರಾದ ಶಾಂತಾರಾಮ ಕುಡ್ವ, ಉದಯ ಕುಮಾರ ಶೆಟ್ಟಿ ರವಿ ಮಡೋಡಿಯವರ ಸಮಯೋಚಿತ ಉತ್ಕೃಷ್ಟ ಯಕ್ಷ ಲೇಖನಗಳೊಂದಿಗೆ ಸಾಯಿಸುಮ ನಾವಡರ ಧೀರ ಕಲೆಯೊಳಗೆ ಕೀರವಾಣಿಯರು ಎನ್ನುವ ವಿಶಿಷ್ಟ ಸರಣಿ ಲೇಖನ ಗಳೊಂದಿಗೆ ಪ್ರಥಮ ಸಂಚಿಕೆ ಮೂಡಿ ಬಂತು. ಮೇ ಮತ್ತು ಜೂನ್ ಸಂಚಿಕೆಯಲ್ಲಿ ಡಿಜಿಟಲ್ ಮಾಧ್ಯಮ ಯಕ್ಷಗಾನಕ್ಕೆ ಪೂರಕವೇ ಅಥವಾ ಮಾರಕವೇ ಎಂಬ ಬಗ್ಗೆ ಬೇಳೂರು ರಾಘವ ಶೆಟ್ಟಿ ಸುರೇಂದ್ರ ಫಣಿಯೂರು ಇವರ ವಿಮರ್ಶಾತ್ಮಕ ಲೇಖನಗಳ ಜೊತೆಗೆ ಎಂ

ಶಾಂತಾರಾಮರ ಕಲಾವಿದರಿಗೆ ತುರ್ತು ಸಹಾಯನಿಧಿ ಇತ್ಯಾದಿ ಹಲವು ವಿಶೇಷ ಲೇಖನಗಳು ಪ್ರಕಟವಾದವು. ಜೂಲೈ ತಿಂಗಳ ಸುರೇಂದ್ರ ಫಣಿಯೂರರ ಯಕ್ಷ ರಂಗಾಯಣ ಬೇಕೇ ಎನ್ನುವ ಲೇಖನ, ರವಿ ಮಡೋಡಿ ಯವರ ಶೀರ್ಷಿಕೆ ಬದಲಾವಣೆ ಎಷ್ಟು ಸರಿ ಎನ್ನುವ ಲೇಖನ, ಯಕ್ಷಗಾನ ಕಲಾವಿದರಿಗೆ ಬಿರುದು ಎಷ್ಟು ಆವಶ್ಯ ಎನ್ನುವ ಎಂ ಶಾಂತಾರಾಮ ಕುಡ್ವರ ಆಗುಸ್ಟ್ ಸಂಚಿಕೆಯ ಲೇಖನ, ಸೆಪ್ಟೆಂಬರ್ ತಿಂಗಳ ರಾಷ್ಟ್ರ ಪ್ರೇಮಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆ ಬಿಟ್ಟ ಮೈ ವೇಷದ ತಾಂತ್ರಿಕ ಸಮಸ್ಯೆ ಲೇಖನಗಳು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದವು. ಅಕ್ಟೋಬರ್ ಸಂಚಿಕೆ ಪಾರ್ತಿ ಸುಬ್ಬ ಪ್ರಶಸ್ತಿ ಪುರಸ್ಕೃತರ ವಿವರವನ್ನೊಳಗೊಂಡ ಲೇಖನ,ಉದಯ ಕುಮಾರ ಶೆಟ್ಟರ ಯಕ್ಷಗಾನ ಪ್ರಸಂಗ ಸಾಹಿತ್ಯ ಮತ್ತು ಪ್ರಕ್ಷಿಬ್ದ ಪ್ರಸಂಗ ಲೇಖನ, ನವೆಂಬರ್ ತಿಂಗಳ ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ ರವಿ ಮಡೋಡಿಯವರ ರಾಜ್ಯೋತ್ಸವ ವಿಶೇಷ ಲೇಖನ, ಡಿಸೆಂಬರ್ ಸಂಚಿಕೆಯ ಪ್ರಸಂಗದಲ್ಲಿ ಮೂಡಿ ಬಂದ ಏಸು ಚರಿತ್ರೆ ಲೇಖನಗಳು ಯಕ್ಷಗಾನ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾದವು. ಜನವರಿ ಸಂಚಿಕೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನ ಅನಿವಾರ್ಯ ಏಕೆ ಲೇಖನ ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟರ ಕುರಿತ ಲೇಖನ ಫೆಬ್ರುವರಿ ತಿಂಗಳ ಯಕ್ಷಗಾನ ಸಮ್ಮೇಳನ ಅಧ್ಯಕರ ಮನದಾಳ ಜೋಶಿಯವರ ಸಂದರ್ಶನ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ತಾಳಮದ್ದಳೆ ಅರ್ಥಗಾರಿಕೆಗೆ ಬೇಕಾದ ಅಂಶಗಳು ಎನ್ನುವ ಎಂ ಶಾಂತಾರಾಮ ಕುಡ್ವರ ಲೇಖನ ಯಕ್ಷಗಾನ ರಂಗಕ್ಕೆ ಪತ್ರಿಕೆಯ ಅಮೂಲ್ಯ ಕೊಡುಗೆ ಎನ್ನಬಹುದು. ಹಲವು ಯಕ್ಷಗಾನ ಕಲಾವಿದರ ಪರಿಚಯಾತ್ಮಕ ಲೇಖನ, ಕಾಡುವ ಪಾತ್ರಗಳು ಸರಣಿ ಲೇಖನಗಳು, ಸಂಪಾದಕೀಯ ಲೇಖನಗಳು ಪ್ರತಿತಿಂಗಳು ಯಕ್ಷಗಾನ ಅಭಿಮಾನಿಗಳ ಮೆಚ್ಚಿಗೆ ಗಳಿಸಿವೆ. ಪತ್ರಿಕೆಯ ಪ್ರತಿಯೊಂದು ಸಂಚಿಕೆಯು ಯಕ್ಷಗಾನ ಆಸಕ್ತರಿಗೆ ಸಂಗ್ರಹ ಯೋಗ್ಯ ಕೃತಿ ಎನ್ನಬಹುದು.

ಜೂನ್ ಸಂಚಿಕೆಯಿಂದ ನಾನು ಕಳುಹಿಸುತ್ತಿರುವ ನಮ್ಮ ಲೈಬ್ರರಿ ಅಂಕಣದ ಯಕ್ಷಗಾನ ಪ್ರಸಂಗ ಪುಸ್ತಕಗಳ, ಕವಿಗಳ ಸಂಗ್ರಹಿತ ಮಾಹಿತಿಯನ್ನು ನಾದ ನೂಪುರ ಪತ್ರಿಕೆ ಪ್ರಕಟಿಸುತ್ತಿದೆ. ನನಗೆ ಈ ಅವಕಾಶ ನೀಡಿದಕ್ಕೆ ಸಂಪಾದಕ ಮಂಡಳಿಗೆ ಕೃತಜ್ಞತೆಗಳು. ನಾದ ನೂಪುರ ಪತ್ರಿಕೆ ಯಶಸ್ವಿಯಾಗಿ ಒಂದು ವರ್ಷಪೂರೈಸಿ ಮುನ್ನೆಡೆಯುತ್ತಿರುವ ಸಂದರ್ಭದಲ್ಲಿ ಎಲ್ಲರಿಗೂ ಶುಭ ಹಾರೈಸುತ್ತ ಇನ್ನೂ ಹೆಚ್ಚಿನ ಎತ್ತರಕ್ಕೆ ಪತ್ರಿಕೆ ಬೆಳೆಯಲಿ ಎಂದು ಆಶಿಸುತ್ತೇನೆ.

***ಉಮೇಶ ಶಿರೂರು ಬೆಂಗಳೂರು 9448353910***

---

# ಮಂದಾರ್ತಿ ಕ್ಷೇತ್ರ ಮಹಾತ್ಮೆ ಮತ್ತು ಮಂದಾರ್ತಿ ಮೇಳ

ಧರಣಿ ದೇವಿಯ ವಜ್ರ ಕೀರೀಟದಂತಹ ಹಿಮಾಲಯ ಪರ್ವತ ಶ್ರೇಣಿಗೆ ಅಲಂಕಾರ ಪ್ರಾಯವಾದ ರಜತಾದ್ರಿಯಲ್ಲಿ ಶಿವ–ಪಾರ್ವತಿಯರು ನೆಲೆ ನಿಂತಿದ್ದರು. ಆ ಸಮಯದಲ್ಲಿ ನಾಗಲೋಕದ ಒಂದು ಭಾಗಕ್ಕೆ ಅಧಿಕಾರಿಯೂ ಮಹಾಶೇಷನ ಮಿತ್ರನೂ ಆದ ನಾಗಲೋಕವನ್ನು ಆಳುತಿದ್ದ ಶಂಖಚೂಡನಿಗೆ



ಹಲವು ವರ್ಷಗಳ ಕಾಲ ಮಕ್ಕಳಾಗದೇ ಶಿವನ ಕುರಿತು ಘೋರ ತಪವನ್ನು ಮಾಡಿ ಮೊರೆ ಹೋದಾಗ ಶಿವಾನುಗ್ರಹದಿಂದ ಐದು ಮಂದಿ ಹೆಣ್ಣುಮಕ್ಕಳಾಗುತ್ತಾರೆ. ಶಿವನ ಅನುಗ್ರಹದಿಂದ ಹುಟ್ಟಿದ ಕಾರಣ ಮುದ್ದಿನಿಂದ ಸಾಕಿ ಅವರಿಗೆ ದೇವರತಿ, ನಾಗರತಿ, ಚಾರುರತಿ, ಮಂದರತಿ, ನೀಲರತಿ ಎಂದು ನಾಮಕರಣ ಮಾಡುತ್ತಾನೆ. ಶಂಖಚೂಡನು ತನ್ನ ಐವರು ಪುತ್ರಿಯರ ವಿವಾಹವನ್ನು ಶಿವಕುಮಾರ ಸುಬ್ರಮಣ್ಯನೊಂದಿಗೆ ಮಾಡಬೇಕೆಂಬ ಇಚ್ಚೆಯನ್ನು ವ್ಯಕ್ತಪಡಿಸುತ್ತಿರುವಾಗಲೇ ಹೃದಯಾಘಾತದಿಂದ ನಿಧನ ಹೊಂದುತ್ತಾನೆ. ಹೆಣ್ಣು ಮಕ್ಕಳೇ ಮುಂದೆ ನಿಂತು ತಂದೆಯ ಅಂತ್ಯ ಸಂಸ್ಕಾರ ಮಾಡಿ ಹಿರಿಯಳಾದ ದೇವರತಿ ನಾಡಿನ ಅರಸಿಯಾಗುತ್ತಾಳೆ. ತಂದೆಯ ಆಸೆಯನ್ನು ನೆರವೇರಿಸಲೋಸುಗ ಐವರೂ ಸೇರಿ ಕೈಲಾಸಗಿರಿಗೆ ಷಣ್ಮುಖನನ್ನು ನೋಡಲು ಹೋಗುತ್ತಾರೆ. ದ್ವಾರದಲ್ಲಿದ್ದ ನಂದಿಕೇಶನು ಅಕಾಲದಲ್ಲಿ ಶಿವನನ್ನು ನೋಡಬಾರದೆಂದು ಅವರನ್ನು ತಡೆಯುತ್ತಾನೆ. ವಾದ ವಿವಾದಗಳಾಗಿ ಕ್ರೋಧದಿಂದ ನಾಗಕನ್ಯೆಯರು ನಂದಿಕೇಶನಿಗೆ 'ಕೈಲಾಸದಲ್ಲಿ ನೀನಿರಲು ಯೋಗ್ಯನಲ್ಲ ಭೂಲೋಕದಲ್ಲಿ



**ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ**

ರಕ್ಕಸನಾಗಿ ಜನಿಸೆಂದು ಶಪಿಸುತ್ತಾರೆ. ಕೋಪಗೊಂಡ ನಂದಿಯು ನೀವು ಯಾವ ನಿರೀಕ್ಷೆ ಇಟ್ಟು ಬಂದಿರೋ ಅದು ಫಲಿಸದೇ ಭೂಲೋಕದಲ್ಲಿ ಬೇರೆ ಬೇರೆಯಾಗ ಬಿದ್ದಿರಿ ಎಂದು ಶಪಿಸುತ್ತಾನೆ. ಪ್ರತ್ಯಕ್ಷರಾದ ಶಿವ ಪಾರ್ವತಿಯರು ಯಾರ ಶಾಪವೂ ಹುಸಿಯಾಗದು ಹೆಣ್ಣುಮಕ್ಕಳಾದ ನಿಮಗೆ ಷಣ್ಮುಖನೊಂದಿಗೆ ಮದುವೆಯಾಗದು ಆದರೆ ಅವನೊಂದಿಗೆ ಪ್ರತ್ಯೇಕವಾಗಿ ಭೂಲೋಕದಲ್ಲಿ ಜನಿಸುವಿರಿ ಎನ್ನುತ್ತಾನೆ. ಪಾರ್ವತಿಯು ನಂದಿಗೆ ಅಭಯನೀಡಿ ಭೋಲೋಕದಲ್ಲಿ ರಕ್ಕಸನಾಗಿ ಹುಟ್ಟಿದ ನಿನಗೆ ನಾನೇ ಮುಂದೆ ಮೋಕ್ಷ ನೀಡುತ್ತೇನೆ ಎನ್ನುತ್ತಾಳೆ.

ಭೂಲೋಕದಲ್ಲಿ ವಾಪ್ರಪಾದನೆಂಬ ಮುನಿಯೋರ್ವನಿಂದ ಪುನಹ ಶಾಪಗ್ರಸ್ತರಾಗಿ ಬಿದಿರ ಬಲೆಯಲ್ಲಿ ಕಾಡ್ಗಿಚ್ಚಿಗೆ ಸಿಲುಕಿ, ರತ್ನಾಕ್ಯನೆಂಬವನಿಂದ ರಾಜ್ಯ ಭ್ರಷ್ಟನಾದ ಸಾತ್ವಿಕ ದೊರೆ ದೇವವರ್ಮನಿಂದ ರಕ್ಷಿಸಲ್ಪಟ್ಟು ಅವನು ಐವರನ್ನು ಉತ್ತರೀಯದಲ್ಲಿ

ಕಟ್ಟಿಕೊಂಡು ಹೋಗುತ್ತಿರುವಾಗ ದೇವರತಿಯು ಅರಸಮ್ಮನ ಕಾಡು ಎಂಬಲ್ಲಿ ಕಾಣೆಯಾಗುತ್ತಾಳೆ. ಅದೀಗ ಅರ್ಸಮ್ಮನ ಕಾನು ಎಂದು ಪ್ರಸಿದ್ದಿ ಪಡೆದಿದೆ. ನಾಗರತಿ ನಾಗೇರ್ತಿ ಎಂಬಲ್ಲಿ ಚಾರುರತಿ ಚೋರಾಡಿ ಎಂಬಲ್ಲಿ ಕಾಣೆಯಾಗುತ್ತಾರೆ. ಮಂದಗಮನೆಯಾದ ಮಂದರತಿ ಮಂದರ್ತಿಯಲ್ಲೂ ನೀಲರತಿ ಸೀತಾನದಿಯ ತಟ ನೀಲಾವರದಲ್ಲಿ ಕಾಣೆಯಾಗುತ್ತಾರೆ. ಅಲ್ಲೆಲ್ಲವೂ ದೇವಾಲಯ ನಿರ್ಮಾಣವಾಗಿದೆ ನೀಲಾವರವನ್ನು ಮಂದಾರ್ತಿಯ ತಂಗಿ ಎಂಬ ಪ್ರತೀತಿ ಇಂದಿಗೂ ಇದೆ. ದೇವಿಯ ಅಪ್ಪಣೆ ಮೇರೆಗೆ ದೇವವರ್ಮನು ವರಾಹಿ ತಟದಲ್ಲಿರುವ ದೇವಿ ವಿಗ್ರಹವನ್ನು ಮಂದಾರ್ತಿಗೆ ತಂದು ಪ್ರತಿಷ್ಠಾಪಿಸುತ್ತಾನೆ. ಕಳೆದುಕೊಂಡ ರಾಜ್ಯವನ್ನೂ ಪಡೆಯುತ್ತಾನೆ. ಸುಂದರವಾದ ಮಂದಿರವನ್ನು ನಿರ್ಮಿಸುತ್ತಾನೆ.ನಾಗದೋಷಕ್ಕೊಳಗಾದ ಸುದೇವನೆಂಬ ಬ್ರಾಹ್ಮಣ ನಾಗಶಾಪ ಪರಿಹಾರಕ್ಕಾಗಿ ಮಂದಾರ್ತಿಯಲ್ಲಿರುವ ನಾಗತೀರ್ಥದಲ್ಲಿ ಸ್ನಾನ ಮಾಡಿ ರೋಗವಾಸಿಯಾದಾಗ ದೇವಿ ಪೂಜೆಯ ಕೈಂಕರ್ಯಗೊಳ್ಳುತ್ತಾನೆ. ಶಾಪಗ್ರಸ್ತನಾದ ನಂದಿಯು ಕಿರಾತ ಕನ್ಯೆ ಮತ್ತು ವ್ಯಾಪ್ರಪಾದ ಮುನಿಗಳ ಸಮಾಗಮದಿಂದ ಮಹಿಷಾಖ್ಯನಾಗಿ ಹುಟ್ಟಿ, ದುಷ್ಟನಾಗಿ ಬೆಳೆಯತೊಡಗುತ್ತಾನೆ. ದೇವಿಯಿಂದ ವಧಿಸಲ್ಪಟ್ಟು ಮೋಕ್ಷ ಪಡೆಯುತ್ತಾನೆ. ದೇವಿಯು ವೀರನಾದ ಮಹಿಷನ ವಧೆಗೆ ಬೊಬ್ಬರ್ಯ, ಕೆಂಡ ಹೈಗುಳಿ ಕಲ್ಲುಕುಟ್ಟಿಗ ದೈವವನ್ನು ಬಳಸಿಕೊಳ್ಳುತ್ತಾಳೆ. ಆ ದಿನವನ್ನು ಇಂದಿಗೂ ಕೆಂಡಸೇವೆಯನ್ನಾಗಿ ಆಚಾರಿಸುತ್ತಾರೆ. ಸುಮಂಗಲಿಯರು ರಾತ್ರಿ ಕೆಂಡ ಹಾರುವುದು ಬಹು ಪ್ರಸಿದ್ದ ಹರಕೆ. ಪ್ರತೀ ವರ್ಷ ಕುಂಭ ಸಂಕ್ರಮಣದಂದು ಸಾವಿರಾರು ಮುತ್ತೈದೆಯರು ಈ ಹರಕೆಯಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥ ಸಿದ್ದಿಸಿಕೊಳ್ಳುತ್ತಾರೆ ಮಹಿಷನನ್ನು ಕೊಂದ ದೇವಿಗೆ ಮುನಿಗಳು ಹರಿವಾಣದಿಂದ ನೈವೇದ್ಯ ಮಾಡುತ್ತಾರೆ.



ಮಂದಾರ್ತಿ ಮೇಳ; ಸದ್ಯ ಐದು ಮೇಳಗಳಿಗೆ ೨೫ ವರ್ಷಕ್ಕೂ ಹೆಚ್ಚು ಆಟ ಬುಕಿಂಗ್ ಆಗಿರುವುದು ವಿಶೇಷ. ಹರಕೆಯಾಟ ಎಂದರೆ ದೇವಿಗೆ ಪ್ರೀಯವಾದ ಬೆಳಕಿನ ಸೇವೆ. ಅಂದರೆ ಇಡೀ ರಾತ್ರ ರಂಗಸ್ಥಳದ ಎರಡೂ ಪಾರ್ಶ್ವದಲ್ಲಿ ಉರಿಯುತ್ತಿರುವ ದೀವಟಿಗೆ ಬೆಳಕು. ಹೊನ್ನೆ ಎಣ್ಣೆಯನ್ನು ಹೆಚ್ಚಾಗಿ ಬಳಸುವುದು ರೂಢಿ. ಒಂದು ರಾತ್ರಿ ಆಟ ಆಡಿಸುವವರ ಮನೆ ಸುತ್ತ ಈ ದೀಪ ಜ್ಞಾನದ ಸಂಕೇತ ಮತ್ತು ಕತ್ತಲನ್ನು ಹೊಡೆದೋಡಿಸಿ ಜ್ಞಾನವೆಂಬ ಬೆಳಕನ್ನು ನೀಡುವುದು. ಈ ಸೇವೆ ಇಷ್ಟು ಖ್ಯಾತಿ ಬರುವುದರ ಹಿಂದೆ ಸಹ ಒಂದು ಕತೆ ಇದೆ. ಸೂರ್ಗೋಳಿ ಅಂತು ಎಂಬ ಗಾಣಿಗ ಸಮಾಜದ ಕಳ್ಳನು ಶ್ರೀಮಂತರ ಮನೆಗೆ ಮತ್ತು ದೇವಸ್ಥಾನಕ್ಕೆ ಕನ್ನ ಹಾಕಿ ಕಳ್ಳತನ ಮಾಡುತಿದ್ದ. ಶ್ರೀಮಂತರ ಮನೆಗೆ ಮಾತ್ರ ಹೋಗುವ ಈತ ಮುಂಚಿತವಾಗಿ ತಿಳಿಸಿಯೇ ಹೋಗುತಿದ್ದ. ಒಂದು ದಿನ ಆನೆಗುಡ್ಡೆ ವಿನಾಯಕ ದೇವಸ್ಥಾನಕ್ಕೆ ಕಳ್ಳತನಕ್ಕೆ ಹೋದಾಗ

ಒಳಗೆ ಪ್ರವೇಶಿಸಲಾಗಲಿಲ್ಲ. ಆನೆಗಳು ಅಟ್ಟಿಸಿಕೊಂಡು ಬರುತ್ತವೆ. ದೇವರನ್ನು ಪ್ರಾರ್ಥಿಸಲಾಗಿ ಅಶರೀರವಾಣಿಯಾಗುತ್ತದೆ. 'ನಿನ್ನ ಕಣ್ಣಿಗೆ ಯಾವ ವಸ್ತು ಕಾಣುತ್ತದೋ ಅದನ್ನು ಕೊಂಡುಹೋಗು.' ಎಂದು ದೇವಿಯ ಅಪ್ಪಣೆಯಾಗುತ್ತದೆ. ಕೈಗೆ ಸಿಕ್ಕಿದ ಭತ್ತದ ಬುಟ್ಟಿಯನ್ನು ಹೊತ್ತು ಬರುವಾಗ ಬುಟ್ಟಿ ಭಾರವಾಗಿ ಬಂಡೆಯೊಂದರ ಮೇಲೆ ಇಡುತ್ತಾನೆ. ಆದರೆ ಪುನಹ ಅದನ್ನು ಎತ್ತಲು ಸಾದ್ಯವಾಗದೇ ಇದ್ದಾಗ ಬುಟ್ಟಿಯೊಳಗಿನ ಗಣಪತಿಯ ವಿಗ್ರಹವನ್ನು ಅಲ್ಲಿಯೇ ಸ್ಥಾಪನೆ ಮಾಡುತ್ತಾನೆ. ಭಾರವಾಗಿ ಇಳಿಸಿದ್ದರಿಂದ ಬಾರ+ಇಳಿ, ಇಂದಿಗೂ ಆ ಊರು ಬಾರಾಳಿ ಎಂದು ಪ್ರಸಿದ್ದಿ ಪಡೆದಿದೆ. ಮಂದಾರ್ತಿ ಮೇಳದ ಪ್ರಥಮ ಸೇವೆಯಂದು ಇಂದಿಗೂ ಕೂಡ ಅದೇ ದೇವಸ್ಥಾನದಲ್ಲಿ ಗೆಜ್ಜೆ ಕಟ್ಟುತ್ತಾರೆ. ಉಳಿದ ಬೆಳ್ಳಿಯ ಸಾಮಾನನ್ನು ಮಂದಾರ್ತಿಗೆ ತಂದಾಗ ಬುಟ್ಟಿ ಹೊತ್ತವರೆಲ್ಲ ಕುಣಿಯಲಾರಂಬಿಸುತ್ತಾರೆ. ಒಳಗಿನಿಂದ ಇಲ್ಲೊಂದು ಯಕ್ಷಗಾನ ಮೇಳ ಆಗಬೇಕೆಂದು ದೇವಿಯ ಅಪ್ಪಣೆಯಾಗುತ್ತದೆ. ಹೀಗೆ ಗಾಣಿಗ ಸಮಾಜದ ಅಂತುವಿನಿಂದ ಗೆಜ್ಜೆ ಸೇವೆ ಬೇಳಕಿನ ಸೇವೆ ಪ್ರಾರಂಭವಾಗುತ್ತದೆ. ಇಂದಿಗೂ ಸಹ ಗಾಣಿಗ ಸಮಾಜದ ಒಬ್ಬ ಕಲಾವಿದನಾದರೂ ಇಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸುತಿದ್ದಾರೆ. ಕ್ಷೇತ್ರ ಮಹಾತ್ಮೆ ಪ್ರಸಂಗದಲ್ಲಿ ಕಲ್ಲುಕುಟಿಗ ಸಹಿತ ವಿವಿಧ ದೈವಗಳ ವೇಷ ರಂಗಕ್ಕೆ ಬರುವುದು ರೂಢಿಯಲ್ಲಿದೆ. ಹಾರಾಡಿ ಮನೆತನದ ಎಲ್ಲಾ ಕಲಾವಿದರು ದೀರ್ಘಕಾಲ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದ್ದಾರೆ. ಯಕ್ಷಗಾನಕ್ಕೆ ಪ್ರಥಮ ರಾಷ್ಟ್ರ ಪ್ರಶಸ್ತಿ ತಂದುಕೊಟ್ಟ ಹಾರಾಡಿ ರಾಮ ಗಾಣಿಗರು ಕುಷ್ಟ ಗಾಣಿಗರು, ನಾರಾಯಣ ಗಾಣಿಗರು, ಮಹಾಬಲ ಗಾಣಿಗರಂತಹ ಘಟಾನುಘಟಿಗಳು ಇದೇ ಮೇಳದಲ್ಲಿ ಸೇವೆ ಸಲ್ಲಿಸಿದ್ದಾರೆ. – ***ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ***

# ಧೀರ ಕಲೆಯೊಳಗೆ ಕೀರವಾಣಿಯರು – 12

## ಯಕ್ಷಕಲಾ ಸಂಪನ್ನೆ; ಶ್ರೀಮತಿ ಕಿರಣ್ ಆರ್ ಪೈ ಶಿವಮೊಗ್ಗ

**ಹೆ**ಣ್ಣು ಮಕ್ಕಳು ಯಕ್ಷಗಾನದಲ್ಲಿ ತೊಡಗಿಸಿಕೊಳ್ಳುವುದೇ ವಿಶೇಷವಾಗಿದ್ದ ಕಾಲದಲ್ಲಿ ಯಕ್ಷಗಾನದಲ್ಲಿ ವೇಷ ಕಟ್ಟಿ ಕುಣಿದವರು ಶ್ರೀಮತಿ ಕಿರಣ್ ಆರ್. ಪೈ ಶಿವಮೊಗ್ಗ ಇವರು. ವಿವಾಹಾನಂತರ ಇವರ ತೊಡಗಿಸುವಿಕೆ ನಿಂತ ನೀರಾಗಲಿಲ್ಲ. ಬದಲಾಗಿ ಹರಿದು ಹೋಗಿ ಅನೇಕರಿಗೆ ಯಕ್ಷಗಾನವನ್ನು ಕಲಿಸಿಕೊಟ್ಟಿತು. ತನ್ನ ಆಸಕ್ತಿಯ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅದನ್ನು ಬೇರೆಯವರಿಗೂ ದಾಟಿಸುವುದು ಸಣ್ಣ ಕೆಲಸವೇನಲ್ಲ. ತನ್ನ ಕಲ್ಪನೆಯ ಕೂಸಿಗೆ "ಸುಮುಖ ಕಲಾಕೇಂದ್ರ" ಎಂದು ಹೆಸರಿರಿಸಿ, ಅನೇಕರಿಗೆ ಯಕ್ಷಕಲೆಯನ್ನು ಉಣಬಡಿಸುತ್ತಿದ್ದಾರೆ.






ಹಳ್ಳಾಡಿಯ ದಿ. ಶ್ರೀ ಹೆಚ್.ಸುಬ್ರಾಯ ಮಲ್ಯ ಹಾಗೂ ಶ್ರೀಮತಿ ಶೋಭಾ ಮಲ್ಯ ಮಗಳಾಗಿ 17–08–1998ರಂದು ಕುಂದಾಪುರದ ಹಳ್ಳಾಡಿಯಲ್ಲಿ ಜನಿಸಿದ ಕಿರಣ್ ಪೈ ಯವರು ಬಿ.ಕಾಂ., ಎಂ.ಎ.(ಕನ್ನಡ) ಪದವೀಧರರು. ತನ್ನ ತಂದೆಯಿಂದಲೇ ಇವರಿಗೆ ಯಕ್ಷಗಾನದ ಪ್ರಾಥಮಿಕ ಅಭ್ಯಾಸ. ಮುಂದೆ ಶ್ರೀ ಪರಮೇಶ್ವರ ಹೆಗ್ಡೆಯವರಲ್ಲಿ ಯಕ್ಷಗಾನದ ಹೆಚ್ಚಿನ ಅಭ್ಯಾಸವನ್ನು ಮಾಡುತ್ತಾರೆ ಕಿರಣ್ ಪೈಯವರು. 'ಮನೆಯೇ ಮೊದಲ ಪಾಠಶಾಲೆ' ಎನ್ನುವುದು ಇದಕ್ಕೆ ಇರಬೇಕು. ಎಳವೆಯಲ್ಲಿ ಕಲಿತ ವಿದ್ಯೆ ಯಾವತ್ತೂ ಗಟ್ಟಿಯೇ. ತಂದೆಯಿಂದ ಕಲಿತ ಯಕ್ಷಗಾನ, ಕಾಲೇಜು ದಿನಗಳಲ್ಲಿ ಮುಂದುವರೆದು ಇನ್ನಷ್ಟು ತೊಡಗಿಸಿಕೊಳ್ಳುವುದಕ್ಕೆ ಕಾರಣವಾಯಿತು. ತಮ್ಮ 9–10 ನೇ ವಯಸ್ಸಿನಲ್ಲಿ ಗೆಜ್ಜೆಕಟ್ಟಿ, ಹೆಜ್ಜೆಯಿಟ್ಟ ಇವರು, ಇವತ್ತಿಗೂ ಬಡಗುತಿಟ್ಟಿನ ಮಹಿಳಾ ಯಕ್ಷಗಾನದಲ್ಲಿ ಬಹು ಬೇಡಿಕೆಯ ಕಲಾವಿದೆ. ಕಾರಣ ಇವರು ಮಾಡುವ ಪಾತ್ರದ ಪರಕಾಯ ಪ್ರವೇಶ. ತನಗೊದಗಿದ ಯಾವುದೇ ಪಾತ್ರಕ್ಕೂ ಜೀವತುಂಬುವ ಸಾಮರ್ಥ್ಯ ಇರುವಂತಹ ಕಲಾವಿದೆ. ಸಾಧಾರಣ ಎಲ್ಲಾ ರೀತಿಯ ಪಾತ್ರಗಳನ್ನು ನಿರ್ವಹಿಸಿದ ಅನುಭವ ಇವರದು. ಶ್ರೀಕೃಷ್ಣ, ಶ್ರೀದೇವಿ, ಹನೂಮಂತ ಇವರ ನೆಚ್ಚಿನ ಪಾತ್ರಗಳು. ಭಾರತದಾದ್ಯಂತ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ ಇವರ ಕಾರ್ಯಕ್ರಮಗಳು ಚಂದನ ವಾಹಿನಿ, ಶಂಕರ ವಾಹಿನಿ, ಆಕಾಶವಾಣಿಯಲ್ಲಿಯೂ ಪ್ರಸಾರಗೊಂಡಿವೆ. ಕೊಂಕಣಿ ಭಾಷೆಯ ಯಕ್ಷಗಾನದ ಸಿಡಿ ಅಮೇರಿಕಾದಲ್ಲೂ ಬಿಡುಗಡೆಗೊಂಡಿದೆ. ಕನ್ನಡ ಮತ್ತು ಕೊಂಕಣಿ ಎರಡೂ ಭಾಷೆಗಳಲ್ಲಿಯೂ ಯಕ್ಷಗಾನ ಪ್ರದರ್ಶನವನ್ನು ನೀಡಿ, ನಿರ್ದೇಶಿಸಿ, ವಿದ್ಯಾರ್ಥಿಗಳ ಮೂಲಕವೂ ಪ್ರದರ್ಶನವನ್ನು ಮಾಡಿಸಿದ್ದಾರೆ. ಇವರ ಕನಸಿನ ಕೂಸು "ಸುಮುಖ ಕಲಾಕೇಂದ್ರ". ಈ ಕೇಂದ್ರದಲ್ಲಿ 25–30 ಮಕ್ಕಳು ಮತ್ತು ಮಹಿಳೆಯರು ಯಕ್ಷಗಾನ ಕಲಿಯುತ್ತಿದ್ದಾರೆ, ಕಲಿತು ಪ್ರದರ್ಶನಗಳನ್ನೂ ನೀಡುತ್ತಿದ್ದಾರೆ. ತಮ್ಮ ಕಲಾಕೇಂದ್ರದ ವಾರ್ಷಿಕೋತ್ಸವದ ಸಂದರ್ಭದಲ್ಲಿ ತಮ್ಮ ತಂದೆಯವರ ನೆನಪಿನಲ್ಲಿ "ದಿವಂಗತ ಹಳ್ಳಾಡಿ ಸುಬ್ರಾಯ ಮಲ್ಯ ಸ್ಮಾರಕ ಪ್ರಶಸ್ತಿ"ಯನ್ನು ಯಕ್ಷಗಾನ ಕ್ಷೇತ್ರದಲ್ಲಿ ಸೇವೆಗೈದ ಹಿರಿಯ ವ್ಯಕ್ತಿಗಳಿಗೆ ನೀಡುತ್ತಾ ಬಂದಿದ್ದಾರೆ. ಶ್ರೀಮತಿ ಕಿರಣ್ ಪೈ ಯವರ ಮತ್ತೊಂದು ಹಿರಿಮೆ ಎಂದರೆ, ಯಕ್ಷಗಾನ ಪ್ರಸಂಗಗಳನ್ನು ಕನ್ನಡದಿಂದ ಕೊಂಕಣಿ ಭಾಷೆಗೆ ಅನುವಾದ ಮಾಡಿದ್ದು. ಇವರು ಅಭಿಮನ್ಯು ಕಾಳಗ, ಸುಧನ್ವ ಕಾಳಗ, ಉತ್ತರನ ಪೌರುಷ, ಸೀತಾ ಸ್ವಯಂವರ, ಜಾಂಬವತೀ ಕಲ್ಯಾಣ, ಕಾಲಯವನ ಕಾಳಗ ಮುಂತಾದ ಪ್ರಸಂಗದ ಪದ್ಯಗಳನ್ನು ಅನುವಾದಿಸಿದ್ದಾರೆ. ಇವರು ಯಕ್ಷಗಾನದ ಕಲೆಯಲ್ಲಿ ಗುರುತಿಸಿಕೊಂಡದ್ದು ಮಾತ್ರವಲ್ಲದೇ, ತಬಲಾದಲ್ಲಿಯೂ ಪರಿಣತಿ ಹೊಂದಿದವರು. ತಬಲಾ ವಾದನವನ್ನೂ ಕೂಡ ಅನೇಕ ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತಿದ್ದಾರೆ. ತಬಲಾ ವಾದನದಲ್ಲಿ ಸೀನಿಯರ್ ಕೋರ್ಸನ್ನು ಮಾಡುತ್ತಿದ್ದಾರೆ. ಈಕೆ ತ್ರೋಬಾಲ್ ಆಟಗಾತಿಯೂ ಹೌದು. ಇವರ ಸಾಧನೆಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು, ಸಂಮಾನಗಳು ಸಂದಿವೆ. ಕೊಂಕಣಿ ಸಾಹಿತ್ಯ ಸಮ್ಮೇಳನದ ರಂಗರತ್ನ ಪ್ರಶಸ್ತಿ, ಉಡುಪಿ ಪಲಿಮಾರು ಮಠದಿಂದ ಅನುಗ್ರಹಿಸಿದ ಶ್ರೀಕೃಷ್ಣ ನೃಸಿಂಹಾನುಗ್ರಹ ಪ್ರಶಸ್ತಿ, ಯಕ್ಷ ಮಹಿಳಾ ರತ್ನ ಪ್ರಶಸ್ತಿ ಹೈದರಾಬಾದ್ ಮುಂತಾದವು. ಪತಿ ಡಾ.ಎಂ.ಬಿ. ರವಿ ಪೈ ಮತ್ತು ಮಕ್ಕಳಾದ ನಿವೇದಿತಾ ಪೈ ಹಾಗೂ ಅರ್ಜುನ್ ಪೈ ಇವರ ಸಹಕಾರ ತಮ್ಮ ಬೆಳವಣಿಗೆಗೆ ಪೂರಕ ಎನ್ನುವ ಕಿರಣ್ ಪೈ, ಯಕ್ಷಗಾನ ಯುವ ಪ್ರೇಕ್ಷಕರಿಂದಾಗಿ ಇನ್ನಷ್ಟು ಬೆಳೆಯುವಂತಾಗಲಿ ಎಂದು ಆಶಿಸುತ್ತಾರೆ. – ***ಸಾಯಿಸುಮಾ ಎಂ. ನಾವಡ, ಕಾರಿಂಜ***

***ನಿಮಗಿದು ಗೊತ್ತೇ? – ಕನ್ನಡ ಛಂದಸ್ಸುಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ದಿ. ಶಿಮಂತೂರು ನಾರಾಯಣ ಶೆಟ್ಟಿಯವರ ಛಂದಸ್ಸಿನ ಕುರಿತ ನಾಲ್ಕು ಕೃತಿಗಳು– ಯಕ್ಷಗಾನ ಛಂದೋಂಬುಧಿ, ಕನ್ನಡದ ಅನರ್ಘ್ಯ ಛಂದೋರತ್ನಗಳು, ವಿ–ಚಿತ್ರಾ ತ್ರಿಪದಿ, ದೇಸೀ ಛಂದೋಬಂಧಗಳ ಪುದುವಟ್ಟು. ಇವರು ಬರೆದ ಯಕ್ಷಗಾನ ಛಂದೋಂಬುಧಿ ಮಹಾಗ್ರಂಥಕ್ಕೆ ಹಂಪಿ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಲಭಿಸಿತ್ತು.***

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

**ಕ**ಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ತೆಂಕು ತಿಟ್ಟಿನ ಹಿರಿಯ ಕಲಾವಿದರಾದ **ನಿಡ್ಲೆ ಗೋವಿಂದ ಭಟ್** ಹಾಗೂ ಬಡಗು ತಿಟ್ಟಿನ ಹಿರಿಯ ಕಲಾವಿದರಾದ **ಮೊಹಮ್ಮದ್ ಗೌಸ್** ***ರವರ*** ಅನುಭವಗಳ ತುಣುಕು ಪ್ರಕಟವಾಗಿದೆ.

**ಕಲಾವಿದರು: ನಿಡ್ಲೆ ಗೋವಿಂದ ಭಟ್**
**ಜನ್ಮ ದಿನಾಂಕ: 1958 ಅಕ್ಟೋಬರ್ 2**
**ಜನ್ಮ ಸ್ಥಳ: ಧರ್ಮಸ್ಥಳದ ನಿಡ್ಲೆ**
**ತಂದೆ: ಈಶ್ವರ ಭಟ್ಟ**
**ತಾಯಿ: ಶಂಕರಿ**
**ಯಕ್ಷಗಾನದ ಗುರುಗಳು: ಶ್ರೀ ಕುರಿಯ ವಿಠಲ ಶಾಸ್ತ್ರಿ ಮತ್ತು ಶ್ರೀ ಪಡ್ರೆ ಚಂದು**
**ಸೇವೆ ಸಲ್ಲಿಸಿದ ಮೇಳಗಳು: ಧರ್ಮಸ್ಥಳ, ವೇಣೂರು, ಸುಬ್ರಹ್ಮಣ್ಯ, ಕರ್ನಾಟಕ, ಪುತ್ತೂರು, ಗೀತಾಂಬಿಕಾ ಯಕ್ಷಗಾನ ಮಂಡಳಿ, ಮುಂಬಯಿ, ಬಪ್ಪನಾಡು ಮೇಳ**
**ಪ್ರಶಸ್ತಿ/ಸನ್ಮಾನ/ಬಿರುದುಗಳು: ಯಕ್ಷ ಲೋಕ ವಿಹಾರಿ, ಪಂಚ ರಾಜ್ಯ ಯಕ್ಷ ಪ್ರಭೃತಿ, ನವರಸ ಚಕ್ರವರ್ತಿ**

**ಸು**ಮಾರು ನಾಲ್ಕೂವರೆ ದಶಕಗಳ ಕಾಲ ಯಕ್ಷಗಾನ ಕ್ಷೇತ್ರದಲ್ಲಿ ಬಲವಾದ ಹೆಜ್ಜೆಯೂರಿ ಧರ್ಮಸ್ಥಳ ಮೇಳದಲ್ಲಿ ಪ್ರಧಾನ ಪಾತ್ರಗಳಲ್ಲಿ ಮೆರೆದು ಕಳೆದ ಕೆಲವು ವರ್ಷಗಳಿಂದ ನಿವೃತ್ತಿ ಪಡೆದುಕೊಂಡರೂ ಹವ್ಯಾಸಿಯಾಗಿ ಕೆಲವೊಮ್ಮೆ ಪಾತ್ರ ನಿರ್ವಹಿಸುವ ಹಿರಿಯ ಅನುಭವಿ ಕಲಾವಿದರು ನಿಡ್ಲೆ ಗೋವಿಂದ ಭಟ್. ತನ್ನ ವಿದ್ಯಾಭ್ಯಾಸವನ್ನು ಏಳನೆಯ ತರಗತಿಗೆ ಮೊಟಕುಗೊಳಿಸಿ ಯಕ್ಷಗಾನ ಕಲೆಯತ್ತ ಆಕರ್ಷಿತರಾಗುತ್ತಾರೆ. 1971ರಲ್ಲಿ ಧರ್ಮಸ್ಥಳ ಯಕ್ಷಗಾನ ಕೇಂದ್ರದ ಪ್ರಥಮ ವರ್ಷದ ವಿದ್ಯಾರ್ಥಿಯಾಗಿ ಯಕ್ಷಗಾನದ ಶಿಕ್ಷಣ ಪಡೆಯುತ್ತಾರೆ. ತನ್ನ ಹದಿಮೂರನೆ ವಯಸ್ಸಿನಲ್ಲಿ ಕೋಡಂಗಿ ವೇಷದಿಂದ ಯಕ್ಷಯಾನ ಪ್ರಾರಂಭಿಸಿದ ಇವರು ಭೀಮ, ಕರ್ಣ, ರಾವಣ, ಕಾರ್ತವೀರ್ಯ, ಕಂಸ, ಅರ್ಜುನ ಜಮದಗ್ನಿ, ಇಂದ್ರಜಿತು ಶಿಶುಪಾಲ, ದಕ್ಷಬ್ರಹ್ಮ ಮೊದಲಾದ ಪಾತ್ರಗಳಲ್ಲಿ ಮೆರೆದವರು. ಇವರು ತಮ್ಮ ಯಕ್ಷ ಜೀವನದ ಬಗ್ಗೆ ಮೆಲುಕು ಹಾಕುವುದು ಹೀಗೆ.

***ಗೋ.ಭ:*** ಯಕ್ಷಗಾನ ಕಲೆ ಜನರಲ್ಲಿ ಸಂಸ್ಕಾರ ಮೌಲ್ಯಗಳನ್ನು ಬೆಳೆಸುವಂತಹಾ ಕಲೆ. ಮೊದಲಿನಿಂದಲೂ ಯಕ್ಷಗಾನ ಬಯಲಾಟಗಳು ಹಳ್ಳಿಗಳಲ್ಲಿ ನಡೆಯುತ್ತಿರುತ್ತವೆ. ಹಿಂದಿನ ಕಾಲದಲ್ಲಿ ಹಳ್ಳಿಯ ಜನರಿಗೆ ವಿದ್ಯಾಭ್ಯಾಸ ಇದ್ದದ್ದು ಕಡಿಮೆ. ಅಂಥವರಿಗೆಲ್ಲ ಯಕ್ಷಗಾನದ ಮುಖಾಂತರ, ಪೌರಾಣಿಕ ಪಾತ್ರಗಳ ಮುಖಾಂತರ ಜೀವನದ ಮೌಲ್ಯ ಏನು ಅನ್ನುವುದನ್ನು ತಿಳಿದುಕೊಳ್ಳಲು ಸಾಧ್ಯವಿತ್ತು. ಧಾರ್ಮಿಕ ಭಾವನೆಗಳನ್ನು ಪ್ರಭಾವಿಸುವಲ್ಲಿ ಕೂಡಾ ಯಕ್ಷಗಾನ ಪ್ರಮುಖವಾಗುತ್ತದೆ. ಆದಕಾರಣ ಯಕ್ಷಗಾನಕ್ಕೆ ವಿಶೇಷವಾದ ಮೌಲ್ಯ ಬರಲಿಕ್ಕೆ ಕಾರಣ ಯಕ್ಷಗಾನ ಮೌಲ್ಯ ಸಂಸ್ಕಾರಗಳನ್ನು ಹೆಚ್ಚಿಸುತ್ತದೆ. ಅದಕ್ಕಾಗಿಯೇ ಹರಕೆ ಯಕ್ಷಗಾನಗಳನ್ನು ನಡೆಸುತ್ತಿದ್ದರು.

***ಪ್ರಭಾವ ಬೀರಿದ ಪಾತ್ರಗಳು:***

***ಗೋ.ಭ:*** ಮನಸಿಗೆ ಮೆಚ್ಚುಗೆಯಾದಂತಹ ಪಾತ್ರಗಳು ಹಲವು ಇವೆ. ವಯಸ್ಸಿನಿಂದಲೇ ಬಾಲ ಗೋಪಾಲದಂತಹ ವೇಷಗಳನ್ನು ಮಾಡುತ್ತಾ ಅನುಭವ ಪಡೆದುಕೊಳ್ಳುತ್ತಾ ಪ್ರಮುಖ ವೇಷಗಳನ್ನು ನಿರ್ವಹಿಸುತ್ತಿದ್ದೆ. ಜಮದಗ್ನಿ, ಹಿರಣ್ಯಾಕ್ಷ, ಇಂದ್ರಜಿತು, ರಾವಣ ಇಂಥ ಪಾತ್ರಗಳು ನನ್ನ ಮೆಚ್ಚಿನ ಪಾತ್ರಗಳು. ನಾನು ತಿರುಗಾಟದಲ್ಲಿರುವಾಗ ಅನೇಕ ಹಿರಿಯ ಕಲಾವಿದರ ಒಡನಾಟ ಇತ್ತು. ಪುತ್ತೂರು ನಾರಾಯಣ ಹೆಗಡೆ, ಕುಂಬ್ಳೆ ಸುಂದರ್ ರಾಯರು, ಸೂರಿ ಕುಮರಿ ಗೋವಿಂದ ಭಟ್ಟರು, ಕುಂಬಳೆ ಶ್ರೀಧರರಾಯರು, ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳರು, ಇಂಥವರ ನಿರ್ದೇಶನದಲ್ಲಿ ನಾನು ತಯಾರಿಯಾಗಿದ್ದು. ಮೊದಲಿಗೆ ವಿಠಲ ಶೆಟ್ಟಿಯವರ ಯಜಮಾನಿಕೆಯ ಕರ್ನಾಟಕ ಮೇಳದಲ್ಲಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದೆ. ಆಗ ದಾಮೋದರ ಮಂಡೆಚ್ಚರು ಮಿಜಾರು ಅಣ್ಣಪ್ಪರು, ಅರುವ ಕೊರಗಪ್ಪ ಶೆಟ್ಟರು, ಕೊಳ್ಯೂರು ರಾಮಚಂದ್ರ ರಾಯರು ಇವರೊಂದಿಗೆಯೂ ತಿರುಗಾಟ ನಡೆಸಿದ್ದೇನೆ. ಕೆಲವು ಕಾಲ ತುಳು ಪ್ರಸಂಗಗಳಲ್ಲಿ ಕೂಡ ಪಾತ್ರಗಳನ್ನು ಮಾಡಿದೆ. ಆಮೇಲೆ ಧರ್ಮಸ್ಥಳ ಮೇಳಕ್ಕೆ ಸೇರ್ಪಡೆಯಾದ ಮೇಲೆ ನನ್ನ ಜೀವನದಲ್ಲಿ ಸಾಕಷ್ಟು ಬದಲಾವಣೆಗಳಾದವು. ನಾನು ಒಬ್ಬ ಕಲಾವಿದ ಎಂದು ಗುರುತಿಸಿಕೊಂಡಿದ್ದೇ ಧರ್ಮಸ್ಥಳ ಮೇಳದಲ್ಲಿ ಅಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿ ನನ್ನ ವೈಯಕ್ತಿಕ ಕಾರಣಗಳಿಗಾಗಿ ನಾನು ಯಕ್ಷಗಾನದಿಂದ ನಿವೃತ್ತಿ ಪಡೆದುಕೊಂಡೆ. ಮತ್ತೆ ಯಾವುದೇ ವೃತ್ತಿಪರ ಮೇಳದಲ್ಲಿ ತಿರುಗಾಟ ಮಾಡುವುದಿಲ್ಲ ಎಂದು ನಿರ್ಧರಿಸಿದೆ. ಅಭಿರುಚಿಗೆ ಬೇಕಾಗಿ ಹೊರಗಡೆ ಹೋಗಿ ಒಂದೊಂದು ವೇಷಗಳನ್ನು ಮಾಡಿಕೊಂಡು ಬರುತ್ತೇನೆ. ನಾನು ಯಕ್ಷಗಾನ ಕಲಿತದ್ದೂ ಪ್ರಾರಂಭದಲ್ಲಿ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಲಲಿತಕಲಾ ಕೇಂದ್ರದಲ್ಲೇ. ಆಗ ಕುರಿಯ ವಿಠಲ ಶಾಸ್ತ್ರಿಗಳು ಮತ್ತು ಪಡ್ರೆ ಚಂದು ಅಣ್ಣ ಗುರುಗಳಾಗಿದ್ದರು. ಹಿಮ್ಮೇಳದಲ್ಲಿ ಮಾಂಬಾಡಿ ನಾರಾಯಣ ಭಾಗವತರು, ನಿಡ್ಲೆ ನರಸಿಂಹ ಭಟ್ರು, ಪುತ್ತೂರು ಹಿರಿಯ ಕೃಷ್ಣ ಭಟ್ರು, ಇವರೆಲ್ಲಾ ಅವರೆಲ್ಲ ನನಗೆ ಗುರುಗಳಾಗಿದ್ದರು. ಆಗ ನನ್ನೊಂದಿಗೆ ಸಹಪಾಠಿಗಳಾಗಿದ್ದವರೆಂದರೆ, ದಿವಂಗತ ಚನ್ನಪ್ಪ ಶೆಟ್ಟರು, ಉದ್ಯಾವರ ಜಯಕುಮಾರ್, ಉಬರಡ್ಕ ಉಮೇಶ್ ಶೆಟ್ಟಿ, ಮುಂಡಾಜೆ ಬಾಲಕೃಷ್ಣ ಮುಂಡಾಜಿ ಸದಾಶಿವ ಶೆಟ್ರು ನಾವು ಪ್ರಾರಂಭದ ವಿದ್ಯಾರ್ಥಿಗಳು. ಅವತ್ತಿನಿಂದ ನಾನು ಪ್ರತಿವರ್ಷವೂ ಬಣ್ಣ ಹಚ್ಚುತ್ತಾ ಬಂದಿದ್ದೇನೆ. ಧರ್ಮಸ್ಥಳ ಮೇಳದಿಂದ ನಾನು ಮತ್ತೆ ಉಬರಡ್ಕ ಉಮೇಶ್ ಶೆಟ್ಟಿ ಒಟ್ಟಿಗೆ ನಿವೃತ್ತಿಯಾದದ್ದು. ಆ ವರ್ಷದಿಂದಲೇ ಕಾಲಮಿತಿ ಯಕ್ಷಗಾನ ಪ್ರಾರಂಭವಾಯಿತು.



***ಯಕ್ಷಗಾನದಲ್ಲಾದ ಬದಲಾವಣೆಗಳ ಕುರಿತು***

***ಗೋ.ಭ:*** ಯಕ್ಷಗಾನದಲ್ಲಿ ಇತ್ತೀಚಿಗೆ ಕಂಡ ಬದಲಾವಣೆಗಳೆಂದರೆ, ಒಂದು ಯಕ್ಷಗಾನ ಕಾಲಮಿತಿಗೆ ಬಂದದ್ದು. ಆ ಕಾಲದಲ್ಲಿ ಒಂದು ಪಾತ್ರವನ್ನು ಮೊದಲಿನಿಂದ ಕೊನೆಯವರೆಗೆ ಒಬ್ಬನೇ ವೇಷಧಾರಿ ಮಾಡಬೇಕಾಗಿತ್ತು. ಒಂದು ಪೀಠಿಕೆ ವೇಷಕ್ಕೆ ಒಬ್ಬ ಹೋದರೆ ಬೆಳಗಿನವರೆಗೂ ಅವನೇ ಆ ಪಾತ್ರವನ್ನು ನಿಭಾಯಿಸಬೇಕಿತ್ತು. ಹಿರಿಯ ಕಲಾವಿದರಿಗೂ ಅದೇ ರೀತಿ. ಇತ್ತೀಚಿಗೆ ಕಲಾವಿದರಿಗೆ ಅವಕಾಶ ಕೊಡುವಂತ ದೃಷ್ಟಿಯಲ್ಲಿ ಒಂದು ಪಾತ್ರವನ್ನು ಇಬ್ಬಿಬ್ಬರು ಅಥವಾ ಮೂರು ಜನ ಹಂಚಿಕೊಂಡು ಮಾಡುವಂತಹ ಒಂದು ಅಭ್ಯಾಸ ಬೆಳೆಯಿತು. ಅಲ್ಲದೇ ವಯಸ್ಸಾದ ಕಲಾವಿದರಿಗೆ ಹೆಚ್ಚು ಕಾಲ ಪಾತ್ರ ಮಾಡುವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೂ ಒಂದು ಪಾತ್ರವನ್ನು ಇಬ್ಬರು ನಿರ್ವಹಿಸುವಂತಹಾ ಪರಿಪಾಠ ಬೆಳೆದು ಬಂತು. ಅದು ಹಾಗೆಯೇ ಮುಂದುವರಿಯಿತು. ಕಾಲಮಿತಿ ಯಕ್ಷಗಾನ ಈಗಿನ ಪರಿಸರಕ್ಕೆ ವಾತಾವರಣಕ್ಕೆ ಅನಿವಾರ್ಯ ಎನ್ನಬಹುದು. ಅದರಿಂದಾಗಿ ಯಕ್ಷಗಾನಕ್ಕೆ ತೊಂದರೆ ಆಯ್ತು ಎಂದು ಹೇಳುವಂತಿಲ್ಲ ಅದರಿಂದ ಕಲೆಗೇನು ದ್ರೋಹ ಆಗಿಲ್ಲ. ಎಲ್ಲ ರಂಗದಲ್ಲೂ ಬದಲಾವಣೆಗಳು ಆಗುವಂತೆ ಸಹಜವಾಗಿ ಇದರಲ್ಲೂ ಬದಲಾವಣೆಗಳಾಗಿದೆ. ಇದರಿಂದ ಕಲೆಗೆ ಪ್ರೇಕ್ಷಕರು ಕಡಿಮೆ ಆಗಿಲ್ಲ. ಈಗ ತುಂಬಾ ವಿದ್ಯಾವಂತ ಕಲಾವಿದರು ಇದ್ದಾರೆ. ಪ್ರೇಕ್ಷಕರೂ ವಿದ್ಯಾವಂತರಿದ್ದಾರೆ. ಅವರೆಲ್ಲರೂ ಸಹಕಾರದಿಂದ ಕಲೆ ಬೆಳೆಯುತ್ತದೆ. ಯಕ್ಷಗಾನ ಕಾಲಮಿತಿ ಆದರೂ ಪ್ರಸಂಗಗಳು ಅಚ್ಚುಕಟ್ಟಾಗಿ ಚೆನ್ನಾಗಿ ನಡೀತಾ ಇವೆ.



***ನಿಮ್ಮ ಪಾತ್ರ ಚಿತ್ರಣಕ್ಕೆ ಪ್ರೇರಣೆಯಾದ ಕಲಾವಿದರು***

***ಗೋ.ಭ:*** ಸೂರಿ ಕುಮೇರು ಗೋವಿಂದ ಭಟ್ರು, ರಾಮಯ್ಯ ರೈಗಳು, ಕಂಸ ರಾವಣ ಇಂತಹ ನಾಟಕೀಯ ಪಾತ್ರಗಳಿಗೆ ನಾರಾಯಣ ಹೆಗಡೆಯವರು ಹಿರಣ್ಯಕಶಿಪು ಈ ಪಾತ್ರಗಳನ್ನೆಲ್ಲ ಅವರಿಂದ ನೋಡಿ ನಾನು ಕಲಿತುಕೊಂಡಿದ್ದೆ. ಈ ಕಲಾವಿದರು ಆ ಪಾತ್ರಗಳನ್ನು ಮಾಡುವಾಗ ಅವರ ಜೊತೆಗೆ ಸಣ್ಣ ಸಣ್ಣ ಪಾತ್ರಗಳನ್ನು ಮಾಡುತ್ತಿದ್ದೆ. ಅವರು ರಂಗದಲ್ಲಿ ಪಾತ್ರ ನಿರ್ವಹಿಸುವಂತಹ ರೀತಿ ನಡೆಗಳು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ಉಳಿದಿವೆ. ಅದೇ ರೀತಿಯ ನಿರ್ವಹಣೆ ನಮ್ಮಿಂದ ಸಾಧ್ಯವಿಲ್ಲವಾದರೂ ಅದನ್ನ ಮನಸ್ಸಿನಲ್ಲಿ ಇಟ್ಟುಕೊಂಡು ಮುಂದುವರಿದುಕೊಂಡು ಬಂದಿದ್ದೇನೆ.

***ಹೊರರಾಜ್ಯಗಳ ತಿರುಗಾಟದ ಅನುಭವ***

***ಗೋ.ಭ:*** ಮಳೆಗಾಲದಲ್ಲಿ ನನ್ನದೇ ಸ್ವಂತ ಮಹಾಗಣಪತಿ ಯಕ್ಷಗಾನ ಮಂಡಳಿ ಎಂಬ ತಂಡವನ್ನು ಕಟ್ಟಿಕೊಂಡು ಉತ್ತರ ಕನ್ನಡ ಮತ್ತು ಇತರ ರಾಜ್ಯಗಳಿಗೆ ಪ್ರವಾಸ ಮಾಡುತ್ತಿದ್ದೆ. ಬೇಸಿಗೆಯಲ್ಲೂ ಮಳೆಗಾಲದಲ್ಲೂ ಪೂರ್ತಿ ತಿರುಗಾಟ ಮಾಡಿಕೊಂಡಿದ್ದೆ. ಆಗ ಮಳೆಗಾಲದಲ್ಲಿ ಕಲಾವಿದರಿಗೆ ಬೇರೆ ಏನು ವೃತ್ತಿ ಇರಲಿಲ್ಲವಲ್ಲ. ನನಗಿಂತಲೂ ಮೊದಲು ಮುಳಿಯಾಲ ಭೀಮ ಭಟ್, ಕುಂಬ್ಳೆ ಸುಂದರ್ ರಾಯರು, ಕಾಸರಗೋಡಿನ ಚೌಹಾಣ್ ಅನ್ನುವವರು ಕಟೀಲು ಪುರುಷೋತ್ತಮ ಭಟ್ರು, ಹೊರರಾಜ್ಯಗಳಿಗೆ ತಂಡಗಳೊಂದಿಗೆ ಪ್ರವಾಸ ಮಾಡುತ್ತಿದ್ದರು. ಅದನ್ನೆಲ್ಲ ಗಮನಿಸಿ ನಾನು ಕೂಡ ಹೊರಗೆ ತಂಡ ಕಟ್ಟಿಕೊಂಡು ಹೋಗಬಹುದು ಎಂಬ ಅಭಿಪ್ರಾಯ ಹುಟ್ಟಿಕೊಂಡಿತು. ಪ್ರಾರಂಭದಲ್ಲಿ 7ರಿಂದ 8 ಯಕ್ಷಗಾನ ಪ್ರದರ್ಶನಗಳು ಸಿಗುತ್ತಿದ್ದವು. ನಾವು ಹೋದ ಕಡೆ ಒಳ್ಳೆಯ ಪ್ರೋತ್ಸಾಹ ದೊರಕುತ್ತಿತ್ತು. ತಂಡದ ಕಲಾವಿದರ ಸಹಕಾರ ಚೆನ್ನಾಗಿ ಸಿಕ್ಕಿತು. ಒಂದು ವರ್ಷದಲ್ಲಿ ನೂರರಿಂದ 125 ಪ್ರದರ್ಶನಗಳನ್ನು ಮಾಡಿದ ಇತಿಹಾಸವು ಇದೆ. ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಕಲ್ಕತ್ತ ಹೀಗೆ ನಿರಂತರ 35–36 ವರ್ಷಗಳ ಕಾಲ ತಿರುಗಾಟ ನಡೆಸಿದ್ದೇನೆ.

ಧರ್ಮಸ್ಥಳ ಟೆಂಟಿನ ಮೇಳವಾಗಿ ನಡೆಯುತ್ತಿದ್ದಾಗ ಅಮೃತ ಸೋಮೇಶ್ವರ ಕಡತೋಕ ಮಂಜುನಾಥ ಭಾಗವತರು ಹೊಸ ಪೌರಾಣಿಕ ಪ್ರಸಂಗಗಳನ್ನು ಜೋಡಣೆ ಮಾಡಿ ಕೊಡುತ್ತಿದ್ದರು. ಅದನ್ನೇ ಮೇಳದಲ್ಲಿ ಆಡಲಾಗುತ್ತಿತ್ತು. ಕಾಲ್ಪನಿಕ ಪ್ರಸಂಗಗಳು ಧರ್ಮಸ್ಥಳ ಮೇಳದಲ್ಲಿ ಆಡೋ ಪದ್ಧತಿಯೇ ಇಲ್ಲ

***ಯಕ್ಷಗಾನದಲ್ಲಿ ಸಂಪಾದಿಸಿದ್ದು –ಸಂತೃಪ್ತಿ***

***ಗೋ.ಭ:*** ಯಕ್ಷಗಾನ ಕಲಾವಿದನಾಗಿ ಇಷ್ಟು ವರ್ಷಗಳ ಕಾಲ ದುಡಿದ ಕಾರಣ ನನ್ನನ್ನು ಜನರು ಗುರುತಿಸುವಂತಾಯ್ತು ಯಕ್ಷಗಾನದ ಬಗ್ಗೆ, ಆ ವೃತ್ತಿ ಬಗ್ಗೆ ತುಂಬಾ ಗೌರವ ಮತ್ತು ಪ್ರೀತಿ ಇದೆ. ಜೀವನದಲ್ಲಿ ಸಾಧಿಸಿದ್ದು ಎಂದರೆ ಕಲಾವಿದನಾಗಿ ಗುರುತಿಸಿಕೊಂಡಿದ್ದು, ಕಲಾವಿದರ ಜೊತೆ ಒಕ್ಕೂಟ, ಅಭಿಮಾನಿಗಳ ಪ್ರೀತಿ ಸಂಪಾದನೆ, ಒಡನಾಟಗಳು. ಒಂದು ಹತ್ತು ಜನ ಕಲಾವಿದರು ಒಟ್ಟಾಗಿ ತಿರುಗಾಟ ನಡೆಸುವಂತಹ ಖುಷಿಯೇ ಬೇರೆ. ನಮ್ಮ ವೈಯುಕ್ತಿಕ ನೋವು ಸಮಸ್ಯೆಗಳು ಏನೇ ಇದ್ದರೂ ರಂಗದಲ್ಲಿ ಕಲೆಯ ಪ್ರದರ್ಶನ ಮಾಡುವಾಗ ಆ ಖುಷಿಯೇ ಬೇರೆ. ಈ ಒಂದು ಸಂತೃಪ್ತಿ ನನಗಿದೆ.

---

**ಕಲಾವಿದರು– ಮಹಮ್ಮದ್ ಗೌಸ್**

**ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಮೇಳ: ಮಡಾಮಕ್ಕಿ ಮೇಳ**

**ತಂದೆ: ಶೇಕ್ ಬುದಾನ್ ಸಾಹೇಬ್**

**ತಾಯಿ: ಬೀಬಿ ಮಾಬೀಬಿ**

**ಧರ್ಮಪತ್ನಿ: ಬೀಬಿ ಆಯಿಷಾ**

**ಮಕ್ಕಳು: ನವೀದ್ ನೀಹ**

**ಯಕ್ಷಗಾನದ ಗುರುಗಳು: ವಂಡ್ಸೆ ಮುತ್ತು ಗಾಣಿಗ, ಸಕ್ಕಟ್ಟು ಲಕ್ಷ್ಮೀ ನಾರಾಯಣ ಭಟ್**

**ಒಟ್ಟು ಸೇವೆ ಸಲ್ಲಿ ಸಲ್ಲಿಸಿದ ವರ್ಷ – 50**

**ಯ**ಕ್ಷಗಾನ ಎಂಬ ಕಲೆ ತಮ್ಮ ಸಮುದಾಯದಲ್ಲಿ ಅಸ್ಥಿತ್ವದಲ್ಲಿಲ್ಲದ ಕಲೆಯಾದರೂ ಆ ಕಲೆಯನ್ನೇ ಪ್ರೀತಿಸಿ ಕಲಾಸೇವೆ ಸಲ್ಲಿಸಿದ ಮೊದಲ ಮುಸ್ಲಿಂ ಪ್ರತಿಭೆ ಎಂದು ಗುರುತಿಸಬಹುದಾದರೆ ಜೋಗಟ್ ಮಹಮ್ಮದ್, ತಮ್ಮ ಸಮುದಾಯದ ವಿರೋಧಗಳಿಂದಾಗಿ ದೀರ್ಘ ಕಾಲ ಅವರ ಕಲಾಸಕ್ತಿಯನ್ನು ಪೋಷಿಸಲು ಅವರಿಂದ ಸಾಧ್ಯವಾಗಿರಲಿಲ್ಲ. ಮುಸ್ಲಿಂ ಸಮುದಾಯದ ಕಲೆ ಅಲ್ಲದೇ ಹೋದರೂ ಆ ಸಮುದಾಯದ ಅದೆಷ್ಟೋ ಬಾಂಧವರು ಕಲೆಯನ್ನು ಪ್ರೋತ್ಸಾಹಿಸಿ, ಮೆಚ್ಚಿಕೊಂಡವರೂ ಇದ್ದಾರೆ. ಆದರೆ ಅದೇ ಕಲೆಯನ್ನು ವೃತ್ತಿಯಾಗಿ ಇಂದಿಗೂ ಕಲೆಯ ಸಂಪಾದನೆ ಗೌರವಗಳಿಂದಲೇ ಬದುಕು ಬೆಳಗಿಸಿಕೊಂಡ ಬೆರಳೆಣಿಕೆಯ ಕಲಾವಿದರಲ್ಲಿ ಬಡಗುತಿಟ್ಟಿನ ಮಡಾಮಕ್ಕಿ ಮೇಳದ ಪ್ರಧಾನ ವೇಷಧಾರಿ ಮೊಹಮ್ಮದ್ ಗೌಸ್ ರವರು ಗುರುತಿಸಿಕೊಳ್ಳುತ್ತಾರೆ. ಯಕ್ಷಗಾನದ ವಿವಿಧ ವಿಭಾಗಗಳನ್ನು ಕಣ್ಣಾರೆ ಕಂಡು, ಅನುಭವಿಸಿ, ಕಲಿತು ವೇಷ ಕಟ್ಟಿದ ಮೊಹಮ್ಮದ್ ಗೌಸ್ ರವರ 45 ವರ್ಷಗಳ ಕಲಾಯಾನ ರೋಚಕವಾದದ್ದು.

ಸುಮಾರು 50–55 ವರ್ಷಗಳ ಹಿಂದೆ ಮನರಂಜನಾ ಮಾಧ್ಯಮವಾಗಿ ಯಾವುದೇ ಮಾಧ್ಯಮಗಳು ಇಲ್ಲದಿದ್ದಂತಹಾ ಸಂದರ್ಭದಲ್ಲಿ ಕುಂದಾಪುರದಿಂದ 12 ಕಿಮೀ ಒಳಗಡೆ ಇರೋ ಕಾವ್ರಾಡಿ ಎಂಬಲ್ಲಿ ಮೊಹಮ್ಮದ್ ಗೌಸ್ ರವರ ಯಕ್ಷಗಾನದ ಆಸೆ ಚಿಗುರೊಡೆಯುತ್ತದೆ. ಬಾಲ್ಯದ ದಿನಗಳಲ್ಲಿ ಊರಿನಲ್ಲಿ ನಡೆಯುತ್ತಿದ್ದ ಭಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಜನೆಯನ್ನು ಇಷ್ಟಪಟ್ಟಿದ್ದ ಅವರನ್ನು ನಂತರ ಯಕ್ಷಗಾನ ಕಲೆ ಆಕರ್ಷಿಸುತ್ತದೆ. ಊರಿನಲ್ಲಿ ತಿರುಗಾಟಕ್ಕೆ ಬರುತ್ತಿದ್ದ ಸೌಕೂರು, ಮಂದಾರ್ತಿ, ಹಾಲಾಡಿ ಮೇಳಗಳ ಯಕ್ಷಗಾನ ವೀಕ್ಷಣೆ ಮಾಡುತ್ತಿದ್ದ ಇವರನ್ನು ಕಲೆ ಸಹಜವಾಗಿ ಸೆಳೆದುಕೊಳ್ಳುತ್ತದೆ. ಆಗ ಬಣ್ಣ ಹಚ್ಚಲು ತೆಂಗಿನ ಸೋಗೆಯ ಗರಿಗಳನ್ನು ಬಳಸುತ್ತಿದ್ದ, ಉಮಿ ಹಾಕಿ ರಂಗಸ್ಥಳ ಮಾಡುತ್ತಿದ್ದ ನೆನಪುಗಳು ಇವರಿಗೆ ಹಚ್ಚ ಹಸಿರು. ಇವರ ಮಾವನವರಿಗೂ ಯಕ್ಷಗಾನದ ಅಭಿರುಚಿ ಹೆಚ್ಚಿದ್ದರಿಂದ ಊರಿನ ಗದ್ದೆ ಬಯಲುಗಳಲ್ಲಿ ನಡೆಯುತ್ತಿದ್ದ ಯಕ್ಷಗಾನಗಳಿಗೆ ಗೌಸ್ ರವರ ಮಾವ ಯಕ್ಷಗಾನ ನೋಡಲು ಹೋಗುತ್ತಿದ್ದಾಗ ಇವರನ್ನೂ ಜೊತೆಗೆ ಕರೆದೊಯ್ಯುತ್ತಿದ್ದರಂತೆ. ಹೀಗೆ ಯಕ್ಷಗಾನ ನೋಡುತ್ತಿರುವಾಗ ಒಮ್ಮೆ ಸೌಕೂರು ಮೇಳದ ಹಾಸ್ಯಗಾರರಾದ ನಾಗು ಶೆಟ್ಟರಲ್ಲಿ ತಾನೂ ವೇಷ ಮಾಡಬೇಕು ಎಂಬ ಆಸೆಯನ್ನು ಹೇಳಿಕೊಳ್ಳುತ್ತಾರೆ. ಆಗ ಅವರು ಪ್ರೀತಿಯಿಂದ ಬಣ್ಣ ಹಚ್ಚಿ ಹುಡುಗನ ಆಸೆಗೆ ಪ್ರೋತ್ಸಾಹಿಸುತ್ತಾರೆ. ಬಾಲ್ಯದ ಅವರ ನೆನಪುಗಳನ್ನು ಅವರು ಹಂಚಿಕೊಳ್ಳುವುದು ಹೀಗೆ..



***ಮ.ಗೌ:*** ಆಗ ಸೌಕೂರು ಮೇಳದಲ್ಲಿ ನಾಗು ಶೆಟ್ಟರು ಎಂಬ ಹಾಸ್ಯಗಾರರಿದ್ದರು. ನಾವು ಚೌಕಿಗೆ ಹೋದಾಗ ಅವರು ಹಣ ನೀಡಿ ನಮ್ಮಲ್ಲಿ ಚಹಾ ತರಿಸಿಕೊಳ್ಳುತ್ತಿದ್ದರು. ನಾನು ಚಹಾ ನೀಡಿ ಅವರಿಂದ ಬಣ್ಣ ಹಾಕಿಸಿಕೊಳ್ಳುತ್ತಿದ್ದೆ. ಆಗ ತೆಂಕಿನಲ್ಲಿ ಧರ್ಮಸ್ಥಳ ಮೇಳ ಕರ್ನಾಟಕ ಮೇಳ ಸುರತ್ಕಲ್ ಮೇಳಗಳು ಇದ್ದವು. ಸುರತ್ಕಲ್ ಮೇಳದಲ್ಲಿ ವೇಣೂರು ಸುಂದರ ಆಚಾರಿ ಕರ್ನಾಟಕ ಮೇಳದಲ್ಲಿ ಮಿಜಾರ್ ಅಣ್ಣಪ್ಪ, ಬಡಗಿನಲ್ಲಿ ಕೆರೆಮನೆ ಶಂಭು ಹೆಗಡೆ, ಮಹಾಬಲ ಹೆಗಡೆಯವರ ಮೇಳ, ಅವರ ಪಾತ್ರಗಳು ನನ್ನನ್ನು ತುಂಬಾ ಪ್ರಭಾವಿಸಿದ್ದವು. ಶಂಭು ಹೆಗಡೆ ಮತ್ತು ಮಹಾಬಲ ಹೆಗಡೆಯವರ ಗದಾಯುದ್ಧದ ಕೌರವ, ಭೀಷ್ಮ ವಿಜಯದ ಭೀಷ್ಮ, ಕೃಷ್ಣ ಸಂಧಾನದ ಕೃಷ್ಣ ಕೋಳ್ಯೂರು ರಾಮಚಂದ್ರ ರಾಯರ ಪಾತ್ರಗಳು, ಅಳಿಕೆ ರಾಮಯ್ಯ ರೈಗಳ ದೇವೇಂದ್ರ ಪಾತ್ರ, ಪುತ್ತೂರು ನಾರಾಯಣ ಹೆಗಡೆಯವರ ಕಂಸ, ಕೊನೆಯ ಕರ್ಣ ಈ ಎಲ್ಲ ಪಾತ್ರಗಳು ನನ್ನನ್ನು ಬಹಳ ಸೆಳೆದಿದ್ದವು. ಸತ್ಯ ಹರಿಶ್ಚಂದ್ರ ಪ್ರಸಂಗದಲ್ಲಿ ರಾಮದಾಸ ಸಾಮುಗರ ಹರಿಶ್ಚಂದ್ರ, ಅಳಿಕೆಯವರ ಅವರ ವಿಶ್ವಾಮಿತ್ರ ಮಿಜಾರು ಅಣ್ಣಪ್ಪನವರ ನಕ್ಷತ್ರಿಕ, ಪಾತ್ರವನ್ನು ನೋಡಿ ತುಂಬಾ ಖುಷಿಯಾಗುತ್ತಿತ್ತು. ಪುರಾಣ ಪಾತ್ರಗಳಲ್ಲಿ, ಹಿಂದೂ ಸಂಸ್ಕೃತಿಯಲ್ಲಿ ಇಂತಹ ಜೀವಂತಿಕೆ ಇದೆಯಲ್ಲ ಎಂಬ ಹೆಮ್ಮೆ, ಇದರಿಂದಾಗಿ ಆಕರ್ಷಣೆ ನನಗೆ ಉಂಟಾಯಿತು. ಆ ಕಲಾವಿದರು ಪಾತ್ರಗಳಿಗೆ ಹೇಗೆ ಜೀವ ಕೊಡುತ್ತಿದ್ದರು ಎಂದು ಬೆರಗಾಗುತ್ತಿದ್ದೆ. ಅವರ ಪಾತ್ರಗಳನ್ನು ನೋಡಿದ್ರೆ ಯಾರಿಗಾದರೂ ಇಷ್ಟವಾಗಿ ಬಿಡಬೇಕು ಅಂತಹ ನಿರ್ವಹಣೆ. ಈ ಕಲಾವಿದರ ಪಾತ್ರಗಳಿಂದ ಪ್ರಭಾವಿತನಾಗಿ ಅಂತದ್ದೇ ಪಾತ್ರವನ್ನು ನಾನು ಮಾಡಬೇಕು, ಜನರಿಂದ ಮೆಚ್ಚುಗೆ ಪಡೆಯಬೇಕು, ಎಂಬ ಆಸೆ ಉಂಟಾಯಿತು. ರಂಗಸ್ಥಳ ಪ್ರವೇಶ ಮಾಡಬೇಕಾದರೆ ಒಂದು ದಾರಿ ಬೇಕು. ರಂಗದಲ್ಲಿ ನಿಲ್ಲುವ ಶೈಲಿ, ಪಾತ್ರದ ನಡೆ, ಯಾವ ರೀತಿ ಹೋಗಬೇಕು, ಬರಬೇಕು ಇದನ್ನೆಲ್ಲ ಕಲಿಯುವ ಆಸೆ ನನ್ನದಾಗಿತ್ತು. ಆ ಸಮಯದಲ್ಲಿ ಕಂಡ್ಲೂರಿನಲ್ಲಿ ಕನ್ನಿಕಾ ಪರಮೇಶ್ವರಿ ಎಂಬ ಒಂದು ಸಂಘ ಇತ್ತು. ವಂಡ್ಸೆ ಮುತ್ತು ಗಾಣಿಗರು ಅಲ್ಲಿ ಗುರುಗಳಾಗಿದ್ದರು. ಅವರೊಂದಿಗೆ ಸಕ್ಕಟ್ಟು  ಲಕ್ಷ್ಮೀನಾರಾಯಣ ಭಟ್, ಭಾಗವತಿಕೆಗೆ ಆರ್ಗೋಡು ಮೋಹನ್ ಶೆಣೈ ಅವರ ತಂದೆ ದೇವದಾಸ್ ಶೆಣೈಯವರು ಇದ್ದರು. ಆಗಿನ ಕಾಲದಲ್ಲಿ ಮೈಕ್ ಸೆಟ್, ಲೈಟಿಂಗ್ ಇಂತಹ ವ್ಯವಸ್ಥೆಗಳು ಇರಲಿಲ್ಲ. ಹಾರ್ಮೋನಿಯಂ ತಾಳ ಇದರ ಮುಖಾಂತರನೇ ಕಲಿಸುತ್ತಿದ್ದರು. ಆ ಸಂಘವನ್ನು ಆಚಾರಿಗಳು ಮತ್ತು ಬಳೆಗಾರರ ಸಂಘದವರು ನಡೆಸುತ್ತಿದ್ದರು. ಅಲ್ಲಿ ನಾನು ಹೋಗಿ ಯಕ್ಷಗಾನ ಕಲಿಯುವ ನನ್ನ ಆಸೆಯನ್ನು ಅವರಲ್ಲಿ ಹೇಳಿಕೊಂಡೆ. ಆಗ ಸಂಘದವರು "ಏನೂ ತೊಂದರೆ ಇಲ್ಲ. ಯಕ್ಷಗಾನದಲ್ಲಿ ಯಾರು ಕೂಡ ಪಾತ್ರಗಳನ್ನು ಮಾಡಬಹುದು" ಎಂದು ಹೆಜ್ಜೆ ಕಲಿಯಲು ಅನುಮತಿ ನೀಡಿದರು. ನನ್ನನ್ನು ತರಗತಿಗೆ ಸೇರ್ಪಡೆ ಮಾಡಿಕೊಂಡರು. ಈ ಸಂಘದಲ್ಲಿ ವಿದ್ಯಾರ್ಥಿಯಾಗಿ ನಾನು ರಂಗಸ್ಥಳ ಪ್ರವೇಶ ಮಾಡುವುದು, ಹೆಜ್ಜೆಗಾರಿಕೆ ಬಗ್ಗೆ ಅಭ್ಯಾಸ ಮಾಡುತ್ತಾ ಬಂದೆ."

ಒಂದು ತಿಂಗಳಾದ ಮೇಲೆ ಊರಿನಲ್ಲೇ ಒಂದು ಯಕ್ಷಗಾನ ಕಾರ್ಯಕ್ರಮ ಇಟ್ಟುಕೊಂಡಿದ್ದರು. ನನಗೆ ಪ್ರಥಮದಲ್ಲಿ ವಿದ್ಯುನ್ಮತಿ ಕಲ್ಯಾಣ ಪ್ರಸಂಗದಲ್ಲಿ ದೇವೇಂದ್ರ ಪಾತ್ರ ಮಾಡುವಂತಹ ಅವಕಾಶ ನೀಡಿದರು. ಆ ಪಾತ್ರಕ್ಕೆ ಕುಣಿಯುವ ರೀತಿ ಸಂಭಾಷಣೆ ಎಲ್ಲ ಹೇಳಿಕೊಟ್ಟರು. ಕಂಡ್ಲೂರ್ ಎಂಬ ಸ್ಥಳದಲ್ಲಿ ಆ ಪ್ರದರ್ಶನ ನಡೆಯುವುದಿತ್ತು. ಆ ಊರಿನಲ್ಲಿ ಸುಮಾರು ಎರಡು ಸಾವಿರದಷ್ಟು ಮುಸ್ಲಿಂ ಸಮುದಾಯದವರು ವಾಸವಿರುವಂತಹಾ ಜಾಗ ಅದು. 8–10 ಪಳ್ಳಿಗಳಿದ್ದವು. ನಾನು ಯಕ್ಷಗಾನ ಕಲಿಯುತ್ತಿರುವುದು ನಮ್ಮ ಜಾತಿಯವರಿಗೂ ಗೊತ್ತಾಗಿ ಜಾತಿಯ ಮುಖಂಡರಿಂದ ವಿರೋಧ ವ್ಯಕ್ತವಾಯಿತು. 'ಆ ಹುಡುಗ ದೇವಸ್ಥಾನದಲ್ಲಿ ಯಕ್ಷಗಾನ ಕಲೀತಾ ಇದ್ದಾನಂತೆ. ವೇಷ ಮಾಡುತ್ತಾನಂತೆ ಅವ. ನಮ್ಮ ಸಮಾಜಕ್ಕೆ ಅದು ಸರಿಯಲ್ಲ' ಅಂತ ನಮ್ಮ ಮನೆಯವರಿಗೆಲ್ಲ ಸ್ವಲ್ಪ ದಬ್ಬಾಳಿಕೆ ನಡೆಸಿದ್ದರು. ಆದ್ರೂ ನಾನು ನನ್ನ ಕಲಿಕೆಯನ್ನು ಮುಂದುವರಿಸಿದೆ. ಯಕ್ಷಗಾನಕ್ಕೆ ಇನ್ನೂ ನಾಲ್ಕು ದಿನ ಒಂದು ವಾರ ಇರಬೇಕಾದ್ರೆ ಗುಸುಗುಸು ಮಾತುಗಳು ಶುರುವಾದವು. ಸಮುದಾಯದ ಮುಖಂಡರು 'ಅವನನ್ನು ವೇಷಕ್ಕೆ ಕಳುಹಿಸಬೇಡಿ ರಗಳೆ ಆಗ್ತದೆ.' ಎಂದು ನಿರ್ಬಂಧ ಹಾಕಿದರು. ಜಾತಿಭೇದಗಳು ಆವಾಗ ತೀವ್ರತರದಲ್ಲಿ ಇರಲಿಲ್ಲ. ಹೊಂದಾಣಿಕೆ ಸಾಮರಸ್ಯ ಇತ್ತು. ನಾನು ಯಕ್ಷಗಾನ ಮಾಡುವುದಕ್ಕೆ, ನಮ್ಮ ಗುರುಗಳು ಅಲ್ಲಿನ ಆಚಾರಿಗಳ ಸಂಘದವರು, ಗಾಣಿಗರು ಬಳೆಗಾರರು ಇವರೆಲ್ಲ ಸೇರಿ ಪ್ರೋತ್ಸಾಹ ನೀಡಿದರು. 'ಹೇಗೂ ಯಕ್ಷಗಾನ ಕಲಿತಿದ್ದೀಯಲ್ಲ, ಹೇಗಾದರೂ ಒಂದು ಪ್ರದರ್ಶನ ನೀಡುವುದು' ಅಂತ ಹೇಳಿದರು. ಪ್ರದರ್ಶನದ ದಿನ ನಾನು ವೇಷ ಮಾಡಿಕೊಳ್ಳುವಾಗ ಮತ್ತೆ ನಮ್ಮ ಸಮಾಜದವರು ಬಂದು ಅಡ್ಡ ಹಾಕಿದ್ದರು ಅವನಿಗೆ ವೇಷ ಮಾಡಲಿಕ್ಕೆ ಆಗುವುದಿಲ್ಲ. ಯಕ್ಷಗಾನ ನಿಲ್ಲಿಸಬೇಕು ಅಂತ ಗಲಾಟೆ ಮಾಡಿದ್ರು. ಆದ್ದರಿಂದ ಅಲ್ಲಿ ನನಗೆ ವೇಷ ಮಾಡುವ ಅವಕಾಶ ತಪ್ಪಿತು. ಅಂದು ಸಮುದಾಯದವರು ನನಗೆ ರಂಗಸ್ಥಳ ಪ್ರವೇಶ ಮಾಡಲು ಬಿಡಲೇ ಇಲ್ಲ. ಆದರೆ ಯಕ್ಷಗಾನ ನಿಲ್ಲಿಸಲಿಲ್ಲ. ಆ ದಿನ ನಾನು ಮಾಡಬೇಕಾದ ಪಾತ್ರವನ್ನು ಬೇರೆಯವರಲ್ಲಿ ಮಾಡಿಸಿದರು. ಇಷ್ಟಾದರೂ ನನ್ನ ಯಕ್ಷಗಾನದ ಪ್ರೀತಿ ಕಡಿಮೆಯಾಗಲಿಲ್ಲ. ಸೌಕೂರು ಹಾಲಾಡಿ ಮಂದಾರ್ತಿ ಇಂಥ ಸ್ಥಳಗಳಲ್ಲಿ ಯಕ್ಷಗಾನಗಳಾದಾಗ ನಾನು ಸ್ವಲ್ಪ ಹೆದರಿ ಹೆದರಿ

ಯಾರಿಗೂ ಗೊತ್ತಾಗದ ರೀತಿ ಪಾತ್ರಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತಿದೆ. ಹಳ್ಳಿಗಳಲ್ಲಿ ಪ್ರದರ್ಶನ ನಡೆದಾಗ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. ನನಗೆ ಯಕ್ಷಗಾನವನ್ನು ಬಿಡಬೇಕು ಎನ್ನುವಂತಹ ಮನಸ್ಸೇ ಇರಲಿಲ್ಲ ಏನಾದ್ರೂ ಮಾಡಿ ಸಾಧನೆ ಮಾಡ್ಲೇಬೇಕು ಎಂಬ ಬಲವಾದ ಆಸೆ ಹೊಂದಿದ್ದೆ. ಹಿಂದೆ ಕಂಡ್ಲೂರಿನಲ್ಲಿ ಬಿಟ್ಟಂತಹ ಪಾತ್ರವನ್ನು ನಾನು ಮತ್ತೆ ಸೌಕೂರು ಮೇಳದಲ್ಲಿ ಮಾಡಿದೆ. ಆಗ ಮೊದಲ ಪಾತ್ರವನ್ನು ಬಹಳ ಚೆನ್ನಾಗಿ ಮಾಡಿದೆ ಅಂತ ಮೇಳದವರು ಮತ್ತು ಜನರು ಬಹಳ ಖುಷಿ ಪಟ್ಟರು. ನಂತರ ಅಂಪಾರು ಎಂಬ ಪ್ರದೇಶದಲ್ಲಿ ನಾನು ಬಬ್ರುವಾಹನ ಎನ್ನುವ ಪಾತ್ರ ಮಾಡಿದೆ. ಅದು ಜನರಿಗೆ ಬಹಳ ಇಷ್ಟವಾಯಿತು. ಈ ವಿಷಯವೂ ನಮ್ಮ ಸಮುದಾಯದವರಿಗೆ ತಲುಪಿ ನಮ್ಮನ್ನು ಸಮುದಾಯದಿಂದ ಹೊರಗೆ ಇಡುತ್ತೇವೆ ಎಂಬ ಬೆದರಿಕೆಯನ್ನು ಸಮುದಾಯದ ಮುಖಂಡರು ನೀಡಿದರು.

ಆಗ ನನ್ನ ತಾಯಿ ನನ್ನನ್ನು ಕರೆದುಕೊಂಡು ಗುರುಗಳಿದ್ದಲ್ಲಿಗೆ ಹೋದರು. ಗುರುಗಳು ಅಮ್ಮನಿಗೆ ತುಂಬಾ ಧೈರ್ಯ ಹೇಳಿದರು. ನೀನು ಇಲ್ಲಿ ವೇಷ ಮಾಡಬೇಡ ಎಂದು ನನಗೆ ಬುದ್ದಿ ಹೇಳಿದರು. ಆಗ ನಾನು 'ಗುರುಗಳೇ, ನನಗೆ ವೇಷ ಮಾಡಬೇಕೆಂಬ ಆಸೆ ಇದೆ. ಯಕ್ಷಗಾನದ ಚಂಡೆ ಮದ್ದಳೆ, ಭಾಗವತಿಕೆಯ ಸ್ವರ ಕೇಳಿದ್ರೆ ಏನೋ ಆಕರ್ಷಣೆ ಎಂದಾಗ, "ಹೌದಪ್ಪ ನಿನಗೆ ಆಕರ್ಷಣೆ ಹೌದು ಆದರೆ ಸಮಾಜವನ್ನು ಮೀರಲಿಕ್ಕೆ ಆಗುವುದಿಲ್ಲವಲ್ಲ" ಎಂದು ಗುರುಗಳು ಪ್ರೀತಿಯಿಂದ ಹೇಳಿದರು. "ನಿಮ್ಮ ಸಮಾಜಕ್ಕೆ ಗೊತ್ತಾಗದೆ ಇರುವ ಹಾಗೆ ಘಟ್ಟದ ಮೇಲೆ ಯಕ್ಷಗಾನ ಪ್ರದರ್ಶನ ಆದಾಗ ಪಾತ್ರಗಳನ್ನು ಮಾಡು." ಎಂದು ನನಗೆ ಸಲಹೆ ನೀಡಿದರು. ನನ್ನ 18–19 ರವಯಸ್ಸಿನಲ್ಲಿ ನಾನು ಸೌಕರು ಮೇಳಕ್ಕೆ ಸೇರ್ಪಡೆ ಆದೆ. ಆ ಹೊತ್ತಿಗೆ ನನ್ನ ಜಮದಗ್ನಿ, ಭಸ್ಮಾಸುರ ಮೊದಲಾದ ಪಾತ್ರಗಳನ್ನು ಜನರು ಇಷ್ಟ ಪಡುತ್ತಿದ್ದರು. ಹೈಸ್ಕೂಲ್ ಕಲಿಯುತ್ತಿರಬೇಕಾದರೆ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ಯಾವುದೇ ವೇಷ ಇಲ್ಲದೇ ಬಣ್ಣಕ್ಕೆ ಬೂದಿ, ರಟ್ಟಿನ ಕಿರೀಟಗಳನ್ನೇ ಬಳಸಿ ಜಮದಗ್ನಿ ಭಸ್ಮಾಸುರ ಪಾತ್ರಗಳನ್ನು ಚೆನ್ನಾಗಿ ಮಾಡುತ್ತಿದ್ದೆ. ಆಗ ಅಲ್ಲಿ ಕಂದಾವರ ರಘುರಾಮ ಶೆಟ್ಟಿಯವರು, ನನಗೆ ಶಾಲೆಯ ಗುರುಗಳಾಗಿದ್ದರು. ಅವರು ನನ್ನ ಪಾತ್ರಗಳನ್ನು ನೋಡಿ ನೀನು ಮುಂದೆ ಒಳ್ಳೆಯ ಕಲಾವಿದನಾಗಬಹುದು, ಎಂದು ಮೆಚ್ಚಿಕೊಳ್ಳುತ್ತಿದ್ದರು. ನಾನು ಅವರೊಂದಿಗೆ "ಹಾಗಾದ್ರೆ ನೀವು ನನ್ನನ್ನು ಸೌಕೂರು ಮೇಳಕ್ಕೆ ಸೇರಿಸಿ ಗುರುಗಳೇ." ಎಂದು ಕೇಳಿಕೊಂಡೆ. ಅದಕ್ಕವರು ಒಪ್ಪಿ ಸೌಕೂರು ಮೇಳಕ್ಕೆ ಸೇರಲು ಸಹಾಯ ಮಾಡಿದರು. ಸೌಕೂರು ಮೇಳದಲ್ಲಿ ಭಸ್ಮಾಸುರ, ದುಷ್ಟಬುದ್ದಿ, ಇಂತಹಾ ಪಾತ್ರಗಳನ್ನು ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ನನ್ನೊಂದಿಗೆ ಇದ್ದ ಕೊಳಲಿ ಹರಿ ನಾಯಕರು, ಬೆಲ್ತೂರು ರಮೇಶ್ ಅಣ್ಣ, ಎರಡನೇ ವೇಷಕ್ಕೆ ಕಾಪು ಜೋಗಪ್ಪ ಶೆಟ್ರು, ಇನ್ನಿತರ ಕಲಾವಿದರೂ ಬಹಳ ಪ್ರೋತ್ಸಾಹ ನೀಡಿದರು. ಆ ಸಮಯದಲ್ಲಿ ನನ್ನ ಭಸ್ಮಾಸುರ, ದುಷ್ಟಬುದ್ಧಿಯ ಪಾತ್ರಗಳು ಬಹಳ ಪ್ರಚಾರ ಆಯಿತು. ಚಿಟ್ಟಾಣಿ ಅವರ ಎರಡನೇ ಭಸ್ಮಾಸುರ ಅಂತ ಹೇಳಿದ್ರೆ ಈ ಗೌಸ್ ಅನ್ನೋವಷ್ಟು ಹೆಸರಾಯಿತು. ನನ್ನ 45 ವರ್ಷಗಳ ತಿರುಗಾಟದಲ್ಲಿ, ಕಮಲಶಿಲೆ, ಸಿಗಂದೂರು, ಹಾಲಾಡಿ ಬಗ್ವಾಡಿ ಮೇಗರವಳ್ಳಿ ಮೇಳಗಳಲ್ಲಿ ಸೇವೆ ಸಲ್ಲಿಸಿದ್ದೇನೆ.



***ಪ್ರಶ್ನೆ: ಧಾರ್ಮಿಕವಾಗಿ ಹಿಂದೂ ಪುರಾಣದ ಕಥೆಗಳನ್ನು ನೀವು ನಿಮ್ಮ ಸಮುದಾಯದಲ್ಲಿ ಓದಿ ತಿಳಿದುಕೊಳ್ಳುವಂತಹ ಅವಕಾಶ ಕಡಿಮೆ. ಪುರಾಣದ ಜ್ಞಾನಕ್ಕಾಗಿ ತಮ್ಮ ಅಧ್ಯಯನ ಹೇಗಿತ್ತು? ನಿಮ್ಮ ಮಾತೃಭಾಷೆಯು ಬೇರೆ ಆಗಿರಬಹುದು. ಹಾಗಾಗಿ ಪಾತ್ರಕ್ಕೆ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ರಿ?***

***ಮ.ಗೌ:*** ನಾವು ಮನೆಯಲ್ಲಿ ಹಿಂದಿ ಅಥವಾ ಉರ್ದು ಮಾತನಾಡುವುದು. ಮನೆಯ ಸುತ್ತಮುತ್ತ ಕೆಲವು ಮನೆಗಳಾದರೂ ಹಿಂದುಗಳ ಮನೆಗಳಿದ್ದವು. ಆದ್ದರಿಂದ ಹೊರಗೆ ವ್ಯಾವಹಾರಿಕ ಭಾಷೆ ಕನ್ನಡವೇ ಆಗಿದೆ. ಹಿಂದೂ ಪುರಾಣದ ಪಾತ್ರಗಳನ್ನು ತಿಳಿದುಕೊಳ್ಳಲು ತಾಳ ಮದ್ದಳೆ ಕಾರ್ಯಕ್ರಮಗಳನ್ನು ಹೆಚ್ಚು ಆಲಿಸುತ್ತಿದ್ದೆ. ಅಲ್ಲದೆ ಕಾರ್ಯಕ್ರಮ ನಡೆಯುವಲ್ಲಿ ಹೋಗಿ ಭಾಗವಹಿಸುತ್ತಿದೆ. ಸಮಯ ಸಿಕ್ಕಾಗಲ್ಲ ಹಿರಿಯ ಕಲಾವಿದರ ಅರ್ಥಗಳನ್ನು ಕೇಳುತ್ತಿದ್ದೆ, ಶೇಣಿ ಗೋಪಾಲಕೃಷ್ಣ ಭಟ್ಟ, ಕುಂಬಳೆ ಸುಂದರ್ ರಾವ್, ಐರೋಡಿ ಗೋವಿಂದಪ್ಪ, ಹಾರಾಡಿ ರಾಮ ಗಾಣಿಗರು, ಇವರ ಪಾತ್ರಗಳನ್ನು ನೋಡಿ ವಿಷಯ ತಿಳಿದುಕೊಳ್ಳುತ್ತಿದ್ದೆ. ಅಲ್ಲದೆ ಅಂದಿನ ಕಾಲದ ಪ್ರಸಿದ್ಧ ಭಾಗವತರಾದ ಕಾಳಿಂಗ ನಾವುಡರು, ನಾರ್ಣಪ್ಪ ಉಪ್ಪೂರರು, ಇವರಿಂದಲೂ ವಿಷಯ ತಿಳಿದುಕೊಳ್ಳುತ್ತಿದ್ದೆ. ಹಾರಾಡಿ ರಾಮಗಾಣಿಗರು ಬಹಳ ಹೆಸರು ಮಾಡಿದವರು. ರಂಗಸ್ಥಳದ ಭೀಷ್ಮ ಅಂದ್ರೆ ನಿಜವಾದ ಭೀಷ್ಮನೆ ಬಂದು ನಿಂತ ಹಾಗೆ ಅವರ ಪಾತ್ರಗಳು. ಇಂತಹ ಕಲಾವಿದರ ಅರ್ಥಗಳನ್ನು ಕೇಳುವುದರ ಮುಖಾಂತರ ನನ್ನ ಜ್ಞಾನ ವೃದ್ದಿಸಿಕೊಂಡೆ ನಾನು ಓದಿದ್ದಕ್ಕಿಂತ ನೋಡಿ ಕಲಿತಿದ್ದೆ ಹೆಚ್ಚು. ನಾನು ಮೆಚ್ಚುವಂತಹಾ ನಮ್ಮದೇ ಸಮುದಾಯದ ಇನ್ನೊಬ್ಬರು ಕಲಾವಿದರೆಂದರೆ ಜೋಗಟ್ ಮೊಹಮ್ಮದ್. ಕುಂಬ್ಳೆಯವರ ಭೀಷ್ಮ ಹಾಗೂ ಜೋಗಟ್ ಮೊಹಮ್ಮದರ ಪರಶುರಾಮ ಪಾತ್ರಗಳು ನನಗೆ ಇಷ್ಟವಾದ ಕುಂಬ್ಳೆ ಅವರೇ ಭೀಷ್ಮ ಮತ್ತೆ ಈ ಜೋಗಟು ಮೊಹಮ್ಮದ್ ಅವರ ಪರಶುರಾಮ ಪಾತ್ರವನ್ನು ನಾನು ಬಹಳ ಇಷ್ಟ ಪಟ್ಟಿದ್ದೆ.

***ಪ್ರಶ್ನೆ: ನಿಮ್ಮನ್ನು ಸಾಕಷ್ಟು ಬೆಳೆಸಿ ಸಪೋರ್ಟ್ ಮಾಡಿರುವಂತಹ ಮೇಳ ಯಾವುದು***

***ಮ.ಗೌ:*** ನನ್ನನ್ನು ರಂಗಕ್ಕೆ ಕರೆದುಕೊಂಡು ಹೋಗಿ ತುಂಬಾ ಪ್ರೋತ್ಸಾಹ ನೀಡಿದ ಪ್ರಥಮ ಮೇಳ ಅಂದರೆ ಅದು ಸೌಕೂರು ಮೇಳ. ಅಲ್ಲಿ ಬೆಲ್ತೂರು ರಮೇಶ ಅಣ್ಣನಂತಹಾ ದೊಡ್ಡ ಕಲಾವಿದರು ಒಡನಾಟ ದೊರಕಿತು. ಯಾವ ಪಾತ್ರವನ್ನೇ ಚೆನ್ನಾಗಿ ನಿಭಾಯಿಸುತ್ತಿದ್ದ ಸಮರ್ಥ ಮೊಳಹಳ್ಳಿ ಹಿರಿಯ ನಾಯಕರಂತಹಾ ಕಲಾವಿದರೊಂದಿಗೆ ಪಳಗಿದ್ದೆ ನಾನು.

***ಪ್ರಶ್ನೆ: ಕಾಲ್ಪನಿಕ ಪ್ರಸಂಗಗಳಲ್ಲಿ ಮಾಡುವಂತಹ ಅವಕಾಶ ಸಿಕ್ಕಿದೆಯಾ***

***ಮ.ಗೌ:*** ಶಿರಸಿ ಮೇಳದಲ್ಲಿ ಅತಿಥಿಯಾಗಿ ಕಾಲ್ಪನಿಕ ಪ್ರಸಂಗಗಳಲ್ಲಿ ಪಾತ್ರಗಳನ್ನು ನಿಭಾಯಿಸಿದ್ದೆ. ಚಿಟ್ಟಾಣಿಯವರೊಂದಿಗೆ ಜೋಡಿ ವೇಷದಲ್ಲಿ ಕಾಣಿಸಿಕೊಂಡಿದ್ದೆ. ಭಾಗ್ಯ ಭಾರತಿ ಇನ್ನಿತರ ಕೆಲವು ಕಾಲ್ಪನಿಕ ಪ್ರಸಂಗಗಳಲ್ಲಿ ಪಾತ್ರ ಮಾಡಿದ್ದೆ.

**ಪ್ರಶ್ನೆ: ಈಗ ನಿಮ್ಮ ಸಮುದಾಯದಲ್ಲಿ ನಿಮ್ಮನ್ನು ಯಾವ ರೀತಿ ರಿಸೀವ್ ಮಾಡ್ತಾರೆ? ಗುರುತಿಸುತ್ತಾರೆ**


***ಮೊ. ಗೌ:*** ಈಗ ಮೊದಲಿನ ಹಾಗೆ ವಿರೋಧಗಳಿಲ್ಲ. ನಾನು ಯಕ್ಷಗಾನ ಕಲೆಯಲ್ಲಿರುವುದನ್ನು ಸಮುದಾಯದವರು ಒಪ್ಪಿಕೊಂಡಿದ್ದಾರೆ. ನಮ್ಮ ಬಗ್ಗೆ ಕೀಳಾಗಿ ಅಥವಾ ಸಣ್ಣ ಭಾವನೆಯಿಂದ ನೋಡುವ ಪರಿಸ್ಥಿತಿ ಇಲ್ಲ. ಎಲ್ಲಕ್ಕಿಂತ ಹೆಚ್ಚು ಈ ಕಲೆಯಲ್ಲಿ ಬೆಳೆಯಲು ನನ್ನ ತಂದೆ ಮತ್ತು ತಾಯಿಯವರು ನನಗೆ ತುಂಬಾ ಬೆಂಬಲ ನೀಡಿದರು. ನನ್ನ ಹೆಂಡತಿ ಮತ್ತು ಮಕ್ಕಳು ಸಾಕಷ್ಟು ನನಗೆ ಬೆಂಬಲ ನೀಡಿದರು. ನನ್ನ ಕಲಾಜೀವನದ ಬಗ್ಗೆ, ಒಳ್ಳೆಯ ಕಲೆಯಲ್ಲಿ ನಾನು ಸಾಕಷ್ಟು ಸಾಧನೆ ಮಾಡುತ್ತಿದ್ದೇನೆ ಎಂಬ ಸಂತೋಷ ಅವರಿಗಿದೆ.

***ಯಕ್ಷಗಾನ ಕಲೆಯ ಬಗ್ಗೆ ಸಾರ್ಥಕತೆಯ ಬಗ್ಗೆ ಅವರ ಮಾತುಗಳಲ್ಲಿ ಹೊರ ಹೊಮ್ಮುವುದು ಹೀಗೆ***

***ಮೊ. ಗೌ:*** ಯಕ್ಷಗಾನ ಎಂದರೆ ಅದೊಂದು ಸಾಗರ ಅದನ್ನು ಪೂರ್ಣ ಮಾಡಿದ ಕಲಾವಿದ ನನ್ನ ಲೆಕ್ಕದಲ್ಲಿ ಯಾರು ಇರಲಿಕ್ಕಿಲ್ಲ. ಅದರೊಳಗೆ ಕೈ ಹಾಕಿ ಎತ್ತಿದಷ್ಟು ಮತ್ತಷ್ಟು ವಿಚಾರಗಳು ಸಿಗುತ್ತದೆ. ನಾವು ಅದರಲ್ಲಿ ಸಣ್ಣ ಹನಿ ಮಾತ್ರ. ಯಕ್ಷಗಾನದಲ್ಲೂ ನೋವುಗಳು ಇದೆ. ಜೀವನ ಎಂದರೆ ಕಷ್ಟದ ದಿವಸಗಳು ಬರುತ್ತವೆ. ಅದೆಲ್ಲ ಸಹಜ. ಆದರೆ, ನಾನೊಬ್ಬ ಮುಸ್ಲಿಂ ಕಲಾವಿದನಾದ್ರೂ ಇತರ ಕಲಾವಿದರು ತಮ್ಮ ಸಹೋದರನಂತೆ ನನ್ನನ್ನು ಸ್ವೀಕರಿಸಿದ್ರು, ಪ್ರಸ್ತುತ 35 ಕಲಾವಿದರ ಜೊತೆ ಮಡಾಮಕ್ಕಿ ಮೇಳದಲ್ಲಿ ನಾನು ತಿರುಗಾಟ ನಡೆಸುತ್ತಿದ್ದೇನೆ. ನನ್ನನ್ನು ಬೇರೆಯವ ಎಂಬ ದೃಷ್ಟಿಯಿಂದ ಯಾರು ಕಂಡವರಿಲ್ಲ. ಚೌಕಿಯಲ್ಲಾಗಲಿ, ರಂಗಸ್ಥಳದಲ್ಲಾಗಲಿ, ಬಿಡಾರದಲ್ಲಾಗಲಿ ಚೆನ್ನಾಗಿಯೇ ನಡೆಸಿಕೊಳ್ಳುತ್ತಾರೆ. ಮುಸ್ಲಿಂ ಎಂಬ ಭಾವನೆಯಲ್ಲಿ ಯಾರೂ ನೋಡಿಲ್ಲ ಹಿಂದೂ ಮುಸ್ಲಿಂ ಅಂತ ಸಂಘರ್ಷ ಮಾಡುವವರು ಮೂರ್ಖರು. ಅವರಿಗೆ ಬುದ್ಧಿ ಇಲ್ಲ. ಮೊನ್ನೆ ನಮ್ಮವರಲ್ಲಿ ನಾನು ಹೇಳುತ್ತಿದ್ದೆ; ನಾನು 35 ಹಿಂದುಗಳ ಜೊತೆಗಿದ್ದೇನೆ. ಆದರೆ ಯಾವುದೇ ಬೇಧಗಳು ನಮ್ಮ ನಡುವೆ ಬಂದಿಲ್ಲ. ರಂಗಸ್ಥಳದಲ್ಲಿ ಎದುರು ಬದುರು ಪಾತ್ರಗಳಲ್ಲಿ ಚರ್ಚೆ ನಡೆಸುತ್ತೇವೆ. ರಂಗಸ್ಥಳದ ಹೊರಗೆ ಬಂದ ಮೇಲೆ, ಪಾತ್ರ ನಿರ್ವಹಣೆಯ ಸರಿ ತಪ್ಪುಗಳ ಬಗ್ಗೆ ವಿಮರ್ಶೆ ಮಾಡುತ್ತೇವೆ ಅಷ್ಟೆ. ಯಕ್ಷಗಾನ ಜಾತಿ ಧರ್ಮವನ್ನು ಮೀರಿದ ಕಲೆ, ಎಲ್ಲ ಧರ್ಮಗಳಿಗೆ ಒಂದು ಉತ್ತಮ ಸಂದೇಶ ಬೋಧನೆ ಕೊಡುವಂತಹ ಕಲೆ. ಮನುಷ್ಯನಿಗೆ ಜಾತಿಗಿಂತ ಮುಖ್ಯ ನೀತಿ ಮುಖ್ಯ. ಯಾಕೆಂದರೆ ನಾನು ಮುಸ್ಲಿಂ ಎನ್ನುವ ಕಾರಣಕ್ಕೆ ಯಾರಾದ್ರೂ ತೊಂದರೆ ಕೊಟ್ಟಿದ್ದರೆ, ನಾನು ಇಂದು ಇಷ್ಟು ಬೆಳೆಯಲು ಸಾಧ್ಯವಿರಲಿಲ್ಲ.

***ಇವರ ಪ್ರಸಿದ್ಧ ಹಾಗೂ ಮೆಚ್ಚಿನ ವೇಷಗಳು–*** ಮಡಾಮಕ್ಕಿ ಮೇಳದಲ್ಲಿ ಪ್ರಧಾನ ವೇಷದಾರಿಯಾಗಿರುವ ಮೊಹಮ್ಮದ್ ಗೌಸ್ ಕಥಾನಾಯಕ ಹಾಗೂ ಖಳ ನಾಯಕ ಎರಡೂ ರೀತಿಯ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲರು. ಸತ್ಯ ಹರಿಶ್ಚಂದ್ರ ಪ್ರಸಂಗದ ಹರಿಶ್ಚಂದ್ರ, ಅಥವಾ ವಿಶ್ವಾಮಿತ್ರನ ಪಾತ್ರ, ಕಾರ್ತವೀರ್ಯಾರ್ಜುನದ ಕಾರ್ತವೀರ್ಯ, ಗದಾಯುದ್ಧದಲ್ಲಿ ಕೌರವ ಭೀಮ, ಭಸ್ಮಾಸುರ, ಕುರುಕ್ಷೇತ್ರದ ಕೌರವೇಶ್ವರ, ಚಂದ್ರಹಾಸ ಪ್ರಸಂಗದ ದುಷ್ಟಬುದ್ಧಿ ಪಾಪಣ್ಣ ವಿಜಯದ ಉಗ್ರಸೇನ, ನಳದಮಯಂತಿ ಪ್ರಸಂಗದಲ್ಲಿ ಋತುಪರ್ಣ, ಶನೀಶ್ವರ ಮಹಾತ್ಮೆಯಲ್ಲಿ ವಿಕ್ರಮಾದಿತ್ಯ ಇವು ನಿರ್ವಹಿಸುವ ಇಷ್ಟದ ಪಾತ್ರಗಳು.

## ನಮ್ಮ ಲೈಬ್ರರಿ – ಪಾರ್ತಿ ಸುಬ್ಬ ವಿರಚಿತ ಪ್ರಸಂಗಗಳು




ಯಕ್ಷಗಾನ ವಾಲ್ಮೀಕಿ ಎಂದು ಪ್ರಸಿದ್ಧನಾದ ಪಾರ್ತಿಸುಬ್ಬ ಕನ್ನಡದ ಮಹಾ ಕವಿಗಳಲ್ಲೊಬ್ಬ. ಈತನ ಕಾಲ 1560–1630 ಎಂದು ಸಂಶೋಧಕರು ಹೇಳುತ್ತಾರೆ. ತೆಂಕುತಿಟ್ಟಿನ ಮೂಲಪುರುಷ ಎಂದು ಪರಿಗಣಿಸಲಾದ ಈತನು ರಾಮಾಯಣ ಆಧಾರಿತ ಎಂಟು, ಮಹಾಭಾರತ ಆಧಾರಿತ ಒಂದು ಮತ್ತು ಭಾಗವತ ಪುರಾಣ ಆಧಾರಿತ ಒಂದು ಅಮೂಲ್ಯ ಪ್ರಸಂಗ ಕೃತಿಗಳನ್ನು ರಚಿಸಿದ್ದಾನೆ. ಪುತ್ರಕಾಮೇಷ್ಟಿ ಹಾಗೂ ಸೀತಾಕಲ್ಯಾಣ, ಪಟ್ಟಾಭಿಷೇಕ, ಪಂಚವಟಿ, ವಾಲಿಸುಗ್ರೀವರ ಕಾಳಗ, ಉಂಗುರ ಸಂಧಿ ಅಥವಾ ಚೂಡಾಮಣಿ, ಸೇತು ಬಂಧನ, ಅಂಗದ ಸಂಧಾನ, ಕುಂಭಕರ್ಣಾದಿ ಕಾಳಗ ಮತ್ತು ಕುಶಲವ ಕಾಳಗ ರಾಮಾಯಣ ಕಥಾ ಹಂದರದ ಪ್ರಸಂಗಗಳಾದರೆ ಐರಾವತ ಪ್ರಸಂಗ ಮಹಾಭಾರತದ ಮತ್ತು ಕೃಷ್ಣ ಚರಿತೆ ಭಾಗವತ ಪುರಾಣ ಆಧಾರಿತ ಪ್ರಸಂಗಗಳು. ಕಾಸರಗೋಡಿನ ಕುಂಬಳೆ ಈತನ ಸ್ಥಳ. ಕಣಿಪುರದ ಶ್ರೀ ಗೋಪಾಲ ಕೃಷ್ಣನ ಸ್ತುತಿ ಇವನ ಪ್ರಸಂಗಗಳಲ್ಲಿ ಕಾಣಸಿಗುತ್ತವೆ. ಪಾರ್ತಿ ಸುಬ್ಬನ ಹೆಚ್ಚಿನ ಪ್ರಸಂಗ ಎಷ್ಟು ಜನಪ್ರಿಯವಾಗಿದ್ದವೆಂದರೆ 1950–60ರ ದಶಕದಲ್ಲಿ ಪ್ರತಿ ಪ್ರಸಂಗಗಳ ಐದರಿಂದ ಹತ್ತು ಸಾವಿರ ಪ್ರತಿಗಳು ಮುದ್ರಣಗೊಂಡು ಮಾರಾಟವಾಗಿ ದಾಖಲೆ ಸೃಷ್ಟಿಸಿವೆ.

ಖ್ಯಾತ ಸಂಶೋಧಕ ಕುಕ್ಕಿಲ ಕೃಷ್ಣ ಭಟ್ಟರು ಪಾರ್ತಿಸುಬ್ಬನ ಕಾಲ ಮತ್ತು ಸ್ಥಳದ ಬಗ್ಗೆ ಸಂಶೋಧನೆ ನಡೆಸಿದ್ದು 1975ರಲ್ಲಿ ಪಾರ್ತಿಸುಬ್ಬನ ಯಕ್ಷಗಾನಗಳು ಪುಸ್ತಕವನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 1985ರಲ್ಲಿ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪಾರ್ತಿ ಸುಬ್ಬನ ಎಲ್ಲಾ ಹತ್ತು ಯಕ್ಷಗಾನ ಪ್ರಸಂಗಗಳು ಮತ್ತು ಸಭಾಲಕ್ಷಣ ಕೃತಿಗಳನ್ನು ಒಳಗೊಂಡ ಪಾರ್ತಿ ಸುಬ್ಬ ವಿರಚಿತ ಯಕ್ಷಗಾನ ಪ್ರಸಂಗ ಸಂಪುಟವನ್ನು ಖ್ಯಾತ ಸಾಹಿತಿ ಕಯ್ಯಾರ ಕಿಞ್ಞಣ್ಣ ರೈ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿದೆ. ಪಾರ್ತಿಸುಬ್ಬ ವಿರಚಿತ ಅಂಗದಸಂಧಾನ ಕೃತಿಯನ್ನು ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ ಮತ್ತು ಶ್ರೀ ನಿತ್ಯಾನಂದ ಗ್ರಂಥಾಲಯ ಮಂಗಳೂರು ಇವರು ಎಂಟರಿಂದ ಹತ್ತು ಆವೃತ್ತಿಗಳಲ್ಲಿ ಪ್ರಕಟಿಸಿದ್ದಾರೆ. ಉಂಗುರ ಸಂಧಿ ಪ್ರಸಂಗವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ. ಐರಾವತ ಪ್ರಸಂಗ ಉಡುಪಿಯ ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಮತ್ತು ಸರಸ್ವತಿ ಬುಕ್ ಡಿಪೋ ಮೈಸೂರು ಇವರಿಂದ ಪ್ರಕಟಿಸಲ್ಪಟ್ಟಿದೆ. ಕುಂಭಕರ್ಣ ಕಾಳಗ ಮತ್ತು ಶ್ರೀ ಕೃಷ್ಣ ಚರಿತೆ ಪ್ರಸಂಗ ಪ್ರಸಂಗವನ್ನು 1930ರಲ್ಲಿ ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾ0ತ ಗ್ರಂಥಾಲಯದಿಂದ ಮುದ್ರಿಸಲ್ಪಟ್ಟರೆ ಕುಶಲವರ ಕಾಳಗ ಡಾ ಕೀಲಾರು ಗೋಪಾಲಕೃಷ್ಣ ಭಟ್ಟ ಪ್ರತಿಷ್ಠಾನ ಸಂಪಾಜೆಯವರಿಂದ ಕುಕ್ಕಿಲ ಕೃಷ್ಣ ಭಟ್ ಸಂಪಾದಿತ ಪಾರ್ತಿಸುಬ್ಬನ ಯಕ್ಷಗಾನಗಳು ಕೃತಿಯಲ್ಲಿ 2009ರಲ್ಲಿ ಪ್ರಕಟವಾಗಿದೆ. ಚೂಡಾಮಣಿ ಪ್ರಸಂಗ ಮತ್ತು ಪಂಚವಟಿ ಪ್ರಸಂಗಗಳನ್ನು ಮಂಗಳೂರಿನ ನಿತ್ಯಾನಂದ ಗ್ರಂಥಾಲಯದವರು 9 ಆವೃತ್ತಿಗಳಲ್ಲಿ ಮುದ್ರಿಸಿದ್ದಾರೆ ಪಂಚವಟಿ ಪ್ರಸಂಗ ಹನ್ನೊಂದು ಬಾರಿ ಮೂಡಬಿದ್ರೆ ದಾಖಲೆ ಮಾಡಿದೆ. ಶ್ರೀ ರಾಮ ಪಟ್ಟಾಭಿಷೇಕ ಸೇತು ಬಂಧನ ಪ್ರಸಂಗಗಳು ಕೂಡ ಏಳೆಂಟು ಬಾರಿ ಮುದ್ರಣಗೊಂಡಿದ್ದು ಜನಪ್ರಿಯ ಪ್ರಸಂಗ ಕೃತಿಗಳಾಗಿ ಗುರುತಿಸಲ್ಪಟ್ಟಿವೆ. ***ಉಮೇಶ ಶಿರೂರು ಬೆಂಗಳೂರು 9448353910***